PRESS STATEMENT OF THE CHIEF MINISTER AT BIJAPUR

ಶ್ರೀ ಕೊಣಂಡೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಗಳು ಇನ್ನೂ ಇಲ್ಲಿಯೇ ಕುಳಿತಿದ್ದಾರೆ. ಅದಕ್ಕಾಗಿ ನಾವು ಅವರನ್ನು ಅಭಿನಂದಿಸಬೇಕಾಗಿದೆ. ನಮ್ಮ ವಿರೋಧ ಪಕ್ಷದ ನಾಯಕರು, ಮುಖ್ಯಮಂತ್ರಿಗಳು ಬಿಜಾಪುರದಲ್ಲಿ ಏನು ಹೇಳಿಕೆ ನೀಡಿದ್ದಾರೆ, ಆದರ ವಿರುದ್ಧ ಒಂದು ಚಾಲೆಂಜ್‌ನ್ನು ಮಾಡಿ ತಮ್ಮ ನಿಲುವನ್ನು ಸ್ಪಷ್ಟಪಡಿಸಿ ಹೇಳಿದ್ದಾರೆ ಆ ಬಗ್ಗೆ ಕಳೆದ 3-4 ದಿವಸಗಳಿಂದ ಈ ಸದನದಲ್ಲಿ ಚರ್ಚೆಯಾಗಿ ಅನೇಕ ಘಟನೆಗಳು ನಡೆದಿವೆ. ಇವತ್ತೂ ಮಾನ್ಯ ಮುಖ್ಯಮಂತ್ರಿಗಳು ನಮ್ಮ ವಿರೋಧ ಪಕ್ಷದ ನಾಯಕರು ಹಾಕಿರ ತಕ್ಕಂಥ ಸವಾಲನ್ನು ಒಪ್ಪಿಕೊಳ್ಳುತ್ತಾರೋ ಇಲ್ಲವೋ ಎಂಬುದನ್ನು ತಿಳಿಸಬೇಕು. ಮತ್ತೂ ಆ ಬಗ್ಗೆ ಎನ್‌ಕ್ವೈರಿ ಮಾಡಿಸುತ್ತಾರೋ ಅಥವಾ ಇಲ್ಲವೋ ಎನ್ನುವ ಬಗ್ಗೆ ಎರಡು ಶಬ್ದದ ಉಸರನ್ನು ಬಿಡಬೇಕು. ಅವರು ಇದರ ಬಗ್ಗೆ ಒಂದು ಸ್ಪಷ್ಟವಾದ ಹೇಳಿಕೆಯನ್ನು ಕೊಟ್ಟುಬಿಟ್ಟರೆ ನಾವು ಈ ಸದನದ ಕಾರ್ಯಕಲಾಪಕ್ಕೆ ಯಾವ ಅಡ್ಡಿ ಆತಂಕವನ್ನು ತಂದೊಡ್ಡುವುದಕ್ಕೆ ಅವಕಾಶ ಮಾಡಿ ಕೊಡುವುದಿಲ್ಲ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳನ್ನು ನಮ್ಮ ವಿರೋಧ ಪಕ್ಷದ ನಾಯಕರು ಏನು ಚಾಲೆಂಜ್‌ನ್ನು ಮಾಡಿದ್ದಾರೆ, ಆ ಸವಾಲನ್ನು ಒಪ್ಪಿಕೊಂಡಿದ್ದಾರೆಯೇ ಇಲ್ಲವೇ ಎನ್ನುವ ಬಗ್ಗೆ ಸ್ಪಷ್ಟವಾಗಿ ಎರಡು ಮಾತಿನಲ್ಲಿ ಹೇಳಬೇಕೆಂದು ಅಪೇಕ್ಷೆ ಪಡುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಅಧ್ಯಕ್ಷರೇ, ಈ ವಿಚಾರ ಈಗ್ಗೆ ಎರಡು ದಿವಸಗಳಿಂದ ಚರ್ಚೆಯಾಗಿ 3ನೇ ದಿವಸ ಚರ್ಚೆಗೆ ಬಂದ ಹಾಗೆ ಕಾಣುತ್ತದೆ. ನಾನು ಈ ವಿಚಾರದ ಬಗ್ಗೆ ಸ್ಪಷ್ಟವಾಗಿ ಹಿಂದಿನ ಸಭೆಯಲ್ಲಿಯೇ ತಿಳಿಸಿದ್ದೇನೆ. ನಾನು ಈಗ ಏನೂ ಹೇಳತಕ್ಕದ್ದು ಇಲ್ಲ. 146ನೇ ಸೆಕ್ಷನ್ ಕಳಗೆ ಇದನ್ನು ಚರ್ಚೆ ಮಾಡಬೇಕೆಂದು ಈ ಪ್ರೊಷನ್ ತಂದಿದ್ದಾರೆ, ಇದನ್ನು ಇಲ್ಲಿ ರೂಲ್ಸ್ ಪ್ರಕಾರ ಚರ್ಚೆ ಮಾಡುವುದಕ್ಕೆ ಬರುವುದಿಲ್ಲವೆಂದು ತಮ್ಮ ತೀರ್ಮಾನವನ್ನು ಈಗಾಗಲೇ ಕೊಟ್ಟಿದ್ದೀರಿ. ತದನಂತರ ಈ ಸಭೆಯಲ್ಲಿ ತಮ್ಮ ತೀರ್ಮಾನವನ್ನು ಪುನರ್ ಪರಿಶೀಲಿಸಬೇಕು ಚರ್ಚೆ ಮಾಡಲು ತಮಗೆ ಅನುಮತಿ ಕೊಡಬೇಕು ಎನ್ನುವ ವಿಚಾರದಲ್ಲಿ ತಾವು ಏನು ಅಪ್ಪಣೆ ಮಾಡಿದ್ದೀರಿ ಎಂಬುದು ನನಗೆ ನೆನಪಿದೆ. ತಾವು ಇದನ್ನೆಲ್ಲಾ ಸ್ಪಷ್ಟ ಮಾಡಿ ತೀರ್ಮಾನ ಕೊಟ್ಟಿದ್ದೀರಿ. ನಿಮ್ಮ ತೀರ್ಮಾನವನ್ನು ಬದಲಾಯಿಸಲು, ಏನಾದರೂ ವಿಷಯಗಳಿದ್ದು ಅದನ್ನು ಸಮರ್ಥನೆ ಮಾಡುವುದು ಇದ್ದರೆ ನನ್ನ ಚೇಂಬರ್ಸಿಗೆ ಬಂದು ತಿಳಿಸಬಹುದು ಎಂದು ಹೇಳಿ ತಾವು ಅಪ್ಪಣೆ ಮಾಡಿ ಹೋದರಿ ಎಂದು ನಾನು ತಿಳಿದುಕೊಂಡಿದ್ದೇನೆ, ತಾವು ಈ ಮಾತನ್ನು ಹೇಳಿ ಈಗಾಗಲೇ ದಿವಸವಾಗಿದೆ ಈ 3 ದಿನಗಳಲ್ಲಿ 3 ದಿವಸದಲ್ಲಿ ಮಾನ್ಯ ಸ್ನೇಹಿತರು ಎಲ್ಲಾ ಸೇರಿ ನಿಮ್ಮ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ಏನೇನನ್ನು ಪ್ರಯತ್ನ ಮಾಡಿದ್ದಾರೋ ನನಗೆ ಗೊತ್ತಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಾವು ಹೇಳಿಕೆ ಕೊಡುವವರಿಗೆ ಬಿಡುವುದಿಲ್ಲವೆಂದು ನಾವು ಎಲ್ಲಾ ತಪಸ್ಸಿಗೆ ಕುಳಿತಿದ್ದೇವೆ.

ಶ್ರೀ ಡಿ. ದೇವರಾಜ್ ಅರಸ್.—ತಾವು ಈ ಬಗ್ಗೆ ಹಿಂದೆ ಏನು ರೂಲಿಂಗ್‌ನ್ನು ಕೊಟ್ಟಿದ್ದೀರಿ ಅದು ಏನು ಬದಲಾವಣೆ ಆಗಿಲ್ಲವೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಈ ವಿಷಯದ ಬಗ್ಗೆ ನೀವು ಈಗಾಗಲೇ ರೂಲಿಂಗ್ ಕೊಟ್ಟಿರುವುದರಿಂದ ನಾನು ಈಗ ಏನಾದರೂ ಹೇಳಿಕೆಯನ್ನು ಕೊಟ್ಟರೆ ನಮ್ಮ ರೂಲಿಂಗ್‌ಗೇ ಪ್ರತ್ಯಕ್ಷವಾಗಿ ಅಪಚಾರ ಮಾಡಿದ ಹಾಗೆ ಆಯಿತು. ಆದುದರಿಂದ ನಾನು ಯಾವ ರೂಲ್ಸ್ ಪ್ರಕಾರ ಹೇಳಿಕೆಯನ್ನು ಕೊಡಬೇಕು ಎನ್ನುವುದರ ಬಗ್ಗೆ ಮಾನ್ಯ ವಿರೋಧ ಪಕ್ಷದ ಸದಸ್ಯರ್ಯಾರು ಇದುವರೆಗೆ ಹೇಳಿಲ್ಲ. ಯಾವ ರೂಲ್ಸ್‌ನ ಕೆಳಗೆ ಹೇಳಬೇಕು ಎಂಬುದನ್ನು ತೋರಿಸಿಲ್ಲ. ಆದರೂ ನನ್ನನ್ನು ಹೇಳಲೇಬೇಕೆಂದು ಕಡ್ಡಾಯ ಮಾಡಿದರೆ ಇದು ನನಗೇನೂ ಅರ್ಥವಾಗುತ್ತಾ ಇಲ್ಲ. ನಾನು ಅವರ ಕಡ್ಡಾಯಕ್ಕೆ ಮಣಿದು ಹೇಳುವುದಾದರೆ, ಮತ್ತು ಮಾನ್ಯ ಸದಸ್ಯರು ಕಡ್ಡಾಯ ಮಾಡುತ್ತಾರೆಂದು ನಾನು ಹೇಳುವುದಾದರೆ ಈ ಮನೆಯಲ್ಲಿ ಕಾನೂನು ಬದ್ಧವಾಗಿ, ಕಡ್ಡಾಯವಾಗಿ ಏನು ಬೇಕಾದರೂ ನಡೆಯುತ್ತದೆ ಎನ್ನುವುದು ಆಗಿ ಬಿಡುತ್ತದೆ. ಮತ್ತು ನಾವು ಇಲ್ಲಿ ಕಾನೂನಿಂದ ನಡೆಯುತ್ತಾ ಇಲ್ಲವೆಂದರೆ, ಯಾರಿಂದರೂ ಜಬರ್‌ದಸ್ತ್ ಮಾಡಿ, ಕೂಗಾಟ ಮಾಡಿ ಮತ್ತೆ ಪುಟ್ಟಸ್ವಾಮಯ್ಯನವರ ಭಾಷಣದಲ್ಲಿ ಹೇಳುವುದಾದರೆ, ಹೇಳಿಕೆ ಕೊಡುವವರೆಗೆ ತಪ್ಪಸನ್ನು ಮಾಡುತ್ತೇವೆಂದರೆ, ಅದು ರಾಮ ನಗರದಲ್ಲಿ ಆಗಬಹುದೇನೋ, ಇಲ್ಲಿ ಆಗುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ರಾಗಾದಿ ಅರಿಷಡ್ವರ್ಗಗಳನ್ನು ತ್ಯಜಿಸಿ, ತ್ರಿಕರಣಶುದ್ಧಿಯಿಂದ, ತದೇಕ ಚಿತ್ತದಿಂದ ಮಾಡುವುದೇ ತಪಸ್ಸು. ಅದರ ಫಲ ಅತನ ತಪಸ್ಸಿನ ಪ್ರಭಾವದ ಮೇಲೆ ಹೋಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ನೀವು ಚನ್ನಪಟ್ಟಣದಲ್ಲಿ ನಾಟಕಗಳನ್ನು ಬಹಳ ಚೆನ್ನಾಗಿ ಆಡಿಸುತ್ತೀರೆಂದು ನಾನು ಕೇಳಿದ್ದೇನೆ. ಬೆಂಗಳೂರಿನಲ್ಲಿಯೂ ನಾಟಕವನ್ನು ಆಡಿಸಿದರೆ ನಾವು ಪ್ರೇಕ್ಷಕರಾಗಿ ಬಂದು ನೋಡಬಹುದು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾವು ನೀವು ಆಡುವಂಥ ನಾಟಕವನ್ನು ಇಡೀ ಕರ್ನಾಟಕದ ಜನತೆ ನೋಡುತ್ತಿರುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ನಿಮ್ಮ ಕಡ್ಡಾಯಕ್ಕೆ, ಒತ್ತಾಯಕ್ಕೆ ನಾನು ಏನಾದರೂ ಮಣಿದು ಒಂದು ಹೇಳಿಕೆ ಕೊಟ್ಟರೆ ಆದರಿಂದ ಮುಂದೆ ನಮ್ಮ ಕಾರ್ಯಕಲಾಪಗಳಿಗೆ ಅನೇಕ ರೀತಿಯಲ್ಲಿ ತೊಂದರೆಯಾಗುತ್ತದೆ. ಅಧ್ಯಕ್ಷರು ರೂಲಿಂಗ್ ಕೊಟ್ಟಿದ್ದರೂ ಸಹ ನಮ್ಮ ಒತ್ತಾಯಕ್ಕೆ ಮಣಿದು ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ, ಆದುದರಿಂದ ನಾವು ಹೇಳಿದ್ದಕ್ಕೆಲ್ಲಾ ಒಪ್ಪಿಕೊಂಡು ಬಿಡುತ್ತಾರೆ ಎಂದು, ಈ ನಂದರ್ಭವನ್ನೇ ಎಲ್ಲದಕ್ಕೂ ಉಪಯೋಗಪಡಿಸಿಕೊಳ್ಳುವುದಕ್ಕೆ ಪ್ರಾರಂಭ ಮಾಡಬಹುದು ; ಆದುದರಿಂದ ನಾವು ಈ ಸಭೆಯಲ್ಲಿ ಸತ್‌ಸಂಪ್ರದಾಯಗಳನ್ನು ಪರಿಪಾಲಿಸುವ ದೃಷ್ಟಿಯಿಂದ, ಸಂಪ್ರದಾಯಗಳನ್ನು ಮುಂದುವರಿಸುವ ದೃಷ್ಟಿಯಿಂದ ಹಾಗೂ ಕಾನೂನನ್ನು ಪರಿಪಾಲಿಸುವ ದೃಷ್ಟಿಯಿಂದ ಈ ಮಾನ್ಯ ಸಭೆಯಲ್ಲಿ ನಮಗೂ ಮತ್ತು ನಿಮಗೆಲ್ಲಾ ರಿಗೂ ಸಹಕಾರಿಯಾಗುವ ರೀತಿಯಲ್ಲಿ ನಾವು ಕಾನೂನನ್ನು ಪಾಲಿಸಿಕೊಂಡು ಹೋಗತಕ್ಕಂಥದ್ದು ನಮ್ಮೆಲ್ಲರ ಕರ್ತವ್ಯ ಮತ್ತು ಧರ್ಮವಾಗಿದೆ.

ಈ ಎಲ್ಲದರ ದೃಷ್ಟಿಯಿಂದ ನಾನು ಈ ನಂದರ್ಭದಲ್ಲಿ ಯಾವ ಪ್ರಕಾರದ ಹೇಳಿಕೆಯನ್ನು ಕೊಡತಕ್ಕಂಥದ್ದು ಸೂಕ್ತವಲ್ಲವೆಂದು ನನ್ನ ಅಭಿಪ್ರಾಯ ಮಾನ್ಯ ದೇವೇಗೌಡರವರು ನಾನು ಮಾಡಿದಂಥ ಭಾಷಣದ ವರದಿಯನ್ನು ಪತ್ರಿಕೆಯಲ್ಲಿ ಓದಿ ಅವರು ಆದಕ್ಕೆ ಒಂದು ಕಾಗದವನ್ನು ನನಗೆ ಬರೆದಿದ್ದಾರೆ. ಆದನ್ನು ಹಿಂದೆಯೇ ನಾನು ಹೇಳಿದ್ದೇನೆ. ಆ ಕಾಗದಕ್ಕೆ ಉತ್ತರ ಕೊಡಬೇಕಾದದ್ದು ಇದೆ, ನಾನು ಅದಕ್ಕೆ ಉತ್ತರವನ್ನು ಸಹ ಕೊಡುವವನಿದ್ದೇನೆ. ಏತ್ಯನ್‌ಮಧ್ಯೆ ಅವರು ನನಗೆ ಏನು ಪತ್ರ ಬರೆದಿದ್ದಾರೆಂಬುದು ಸಹ ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಅವರು ಏನು ನನಗೆ ಕಾಗದ ಬರೆದಿದ್ದಾರೆ ಆದಕ್ಕೆ ನಾನು ಉತ್ತರ ಕೊಡುತ್ತೇನೆ. ಇದಕ್ಕೆ ನಾನು ಕೆಲವು ಕಾಲ ತೆಗೆದುಕೊಂಡು ಕೊಡಬೇಕಾಗುತ್ತದೆ; ನನ್ನ ದೃಷ್ಟಿಯಲ್ಲಿ ಹೇಳುವುದಾದರೆ, ಆ ಪತ್ರಿಕೆಯ ಹೇಳಿಕೆಗೂ, ಈ ಸದನಕ್ಕೂ ಯಾವ ವಿಧವಾದಂಥ ಸಂಬಂಧವಿಲ್ಲ ಮತ್ತು ಅದು ಕಾನೂನು ಪ್ರಕಾರವಾಗಿಲ್ಲವೆನ್ನುವ ದೃಷ್ಟಿಯಿಂದ ಈಗ ನಾನು ಏನೂ ಹೇಳುವುದಕ್ಕೆ ಸಿದ್ಧನಿಲ್ಲ.

3-00 P M.

ಶ್ರೀ ಸಿ. ಬೈರೇಗೌಡ.— ಕಾನೂನು ಪ್ರಕಾರ ಅದು ಸಾಧ್ಯವಿಲ್ಲದಿದ್ದರೂ ಸಹ ನಾವು ಒಂದು ಒಳ್ಳೆಯ ಸತ್-ಸಂಪ್ರದಾಯವನ್ನು ಬೆಳೆಸಿಕೊಂಡು ಬರಬೇಕಾಗಿದೆ. ಆ ಕಾರಣದಿಂದ ಮಾನ್ಯ ದೇವೇಗೌಡರ ಸವಾಲನ್ನು ಒಪ್ಪಿದ್ದೇನೆ ಆಥವಾ ಇಲ್ಲ ಎಂದು ಮಾನ್ಯ ಮುಖ್ಯ ಮಂತ್ರಿಗಳು ಜಂಟರ್‌ಮೆನ್ನಿಯಾಗಿಯಾದರೂ ಒಂದೇ ಒಂದು ಮಾತಿನಲ್ಲಿ ಹೇಳಬಹುದು ;

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ದೇವೇಗೌಡರನ್ನು ಫೇರಾವೋ ಮಾಡಿದಂತೆ ಮಾನ್ಯ ಸದಸ್ಯರು ನನ್ನನ್ನು ಸಹ ಮಾಡಬಹುದೆಂದು ಕಾಣುತ್ತದೆ. ಈಗ ನಾನು ಹೇಳುವುದು ಹೇಳಿದ್ದಾಯಿತು ; ಈಗ ನಾನು ಮೇಲ್ಮನೆಗೆ ಹೋಗಬೇಕಾಗಿದೆ. ಆದಕಾರಣ ತಾವು ನಾನು ಅಲ್ಲಿಗೆ ಹೋಗಲು ಅನುಮತಿ ಕೊಡಬೇಕು.

ಶ್ರೀ ಎಸ್ ಬಂಗಾರಪ್ಪ.—ತಾವು ಸ್ವಲ್ಪ ಇಲ್ಲಿಯೇ ಇರಬೇಕೆಂದು ನನ್ನ ಪ್ರಾರ್ಥನೆ. ತಾವು ಇಲ್ಲಿಯವರೆಗೆ ಹೇಳಿದ್ದನ್ನು ನಾನು ಸಂಪೂರ್ಣವಾಗಿ ತಿಳಿದುಕೊಂಡಿದ್ದೇನೆ. ಎರಡು ವಿಷಯಗಳನ್ನು ತಾವು ಈ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ; ಒಂದನೆಯದಾಗಿ ಇದು ಕಾನೂನಿನ ಚೌಕಟ್ಟಿನಲ್ಲಿ ಬರುವುದಿಲ್ಲ ಎಂದು ;

ಅಧ್ಯಕ್ಷರು.—ನಾನೂ ಸಹ ಅದಕ್ಕೆ ಯಾವ ತರಹದ ಪ್ರಾಮಿಜನ್ ಇಲ್ಲ ಎಂದು ಮೂರು ಸಲ ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ಕಳಿಸಿಕೊಟ್ಟ ನಿರ್ಣಯದ ಬಗ್ಗೆ ತಾವು ಈಗಾಗಲೇ ತಮ್ಮ ರೂಲಿಂಗ್ ಕೊಟ್ಟಿದ್ದೀರಿ. ಅದನ್ನು ಮತ್ತೊಮ್ಮೆ ಪುನರ್ ಪರಿಶೀಲಿಸಿ ಅದರ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ನಿವೇದನೆ ಮಾಡಿಕೊಂಡಾಗ, ಅದಕ್ಕೆ ತಾವು ಒಪ್ಪಿಗೆ ಕೊಡದಿರುವ ಕಾರಣ ಆ ಬಗ್ಗೆ ಯಾವ ರೀತಿ ಉತ್ತರ ಕೊಡುವುದಕ್ಕೆ ಸಾಧ್ಯ ಎಂದು ಮುಖ್ಯಮಂತ್ರಿ

ಗಳು ಹೇಳಿದರು. ಆದರೆ ಈ ಹಿಂದೆ ಇಂತಹ ಅನೇಕ ಎಚಾರಗಳು ಪ್ರಸ್ತಾಪಕ್ಕೆ ಬಂದಾಗ, ರೂಲ್ಸ್ ಪ್ರಕಾರ ಅದನ್ನು ಪ್ರಸ್ತಾಪ ಮಾಡಲು ಸಾಧ್ಯವಿಲ್ಲ ಎಂದು ಅಂದಿನ ಅಧ್ಯಕ್ಷರು ಹೇಳಿದರೂ ಸಹ, ವಿಷಯ ಗಹನವಾಗಿದ್ದರೆ, ಸಾರ್ವಜನಿಕ ಪ್ರಾಮುಖ್ಯತೆಯನ್ನು ಹೊಂದಿದ್ದರೆ, ನಾವು ಹಾಕಿ ಕೊಂಡಿರುವ ಸತ್ಸಂಪ್ರದಾಯವನ್ನು ಮೀರಿ ಅದರ ಬಗ್ಗೆ ಪ್ರಸ್ತಾಪ ಮಾಡಲು ಅವಕಾಶ ಕೊಡ ಬೇಕೆಂದು ಕೇಳಿದಾಗ ಅದಕ್ಕೆ ಅವಕಾಶ ಕೊಟ್ಟಿದ್ದಾರೆ. ನಂತರ ಸರ್ಕಾರದವರು ಸಹ ಅದರ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದಾರೆ. "In the interest of the State and the public"— ಅನ್ನತಕ್ಕಂಥ ದೃಷ್ಟಿಯಿಂದ ಸರ್ಕಾರದವರು ಹೇಳಿಕೆ ಕೊಟ್ಟಿರುವ ಪ್ರಸಂಗಗಳು ಅನೇಕವಿವೆ. ಹಿಂದಿನ ಅಧಿಕೃತ ಪರಂಪರೆಯನ್ನು ಬೇಕಾದರೆ ತೆಗೆದುನೋಡಿದರೆ ಇಂತಹ ಪ್ರಸಂಗಗಳು ಯಥೇಚ್ಛವಾಗಿ ಸಿಗುತ್ತವೆ. ಈ ದೃಷ್ಟಿಯಿಂದ.....

ಶ್ರೀ ಎಂ. ಬಿ. ರಾಮಸ್ವಾಮಿ.—ಪಾಯಿಂಟ್ ಆಫ್ ಆರ್ಡರ್; ಅಧ್ಯಕ್ಷರೇ, ತಾವು ಈಗಾಗಲೇ ಈ ಬಗ್ಗೆ ತಮ್ಮ ರೂಲಿಂಗ್‌ನ್ನು ಕೊಟ್ಟಿದ್ದೀರಿ ಆ ರೀತಿ ರೂಲಿಂಗ್ ಕೊಟ್ಟ ಮೇಲೆ ಆ ವಿಷಯ ಮುಕ್ತಾಯವಾಯಿತು ಎಂದು ನಾನು ತಿಳಿದುಕೊಂಡಿದ್ದೇನೆ. ಈಗ ನಮ್ಮ ಮುಂದೆ ತೆಗೆದುಕೊಳ್ಳ ಬೇಕಾಗಿರತಕ್ಕಂಥ ಇನ್ನೂ ಅನೇಕ ಪ್ರಾಮುಖ್ಯವಾದ ವಿಷಯಗಳಿವೆ. ಆದಕಾರಣ ತಾವು ರೂಲಿಂಗ್ ಕೊಟ್ಟಮೇಲೂ ಸಹ ಅದೇ ವಿಷಯವನ್ನು ಪ್ರಸ್ತಾಪ ಮಾಡುತ್ತಾ ಹೋದರೆ ಚೇರ್‌ನ್ನು ಉಲ್ಲಂಘನೆ ಮಾಡಿದಂತಾಗುವುದಿಲ್ಲವೇ ?

ಅಧ್ಯಕ್ಷರು.—ನಾನು ಈಗಾಗಲೇ ಆ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಆದರೂ ಸಹ ಆ ಬಗ್ಗೆ ನನ್ನ ಮನವನ್ನು ಒಲಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕೆ ನಾನು ಏನು ಮಾಡುವುದು ?

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ನಾವು ನಮ್ಮ ಪ್ರಯತ್ನವನ್ನು ಎರಡು ದಿಕ್ಕಿನಲ್ಲಿ ಮಾಡುತ್ತಿದ್ದೇವೆ. ಒಂದು, ಅಧ್ಯಕ್ಷರು ತಮ್ಮ ರೂಲಿಂಗ್‌ನ್ನು ಪುನರ್-ಪರಿಶೀಲನೆ, ಮುಖ್ಯಮಂತ್ರಿಗಳ ಮೇಲೆ ಸ್ವಲ್ಪ ಒತ್ತಡ ತಂದು ಈ ಬಗ್ಗೆ ಹೇಳಿಕೆ ಕೊಡಿಸಬೇಕೆಂದು ಹೇಳುತ್ತಿದ್ದೇವೆ. ಈ ಹಿಂದೆ ಸಹ ರೂಲ್ಸ್‌ನ್ನು ಬಿಟ್ಟು ಸರ್ಕಾರದವರು ಹೇಳಿಕೆ ಕೊಟ್ಟಿರುವ ಪ್ರಸಂಗಗಳು ಇವೆ. ಆದರಂತೆ ಇದೂ ಸಹ ಸಾರ್ವಜನಿಕ ಪ್ರಾಮುಖ್ಯತೆಯನ್ನು ಪಡೆದಿರುವ ಕಾರಣ ಮುಖ್ಯಮಂತ್ರಿಗಳು ಹೇಳಿಕೆ ಕೊಡಬೇಕು. ಈಗ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಮಾತನಾಡುತ್ತಾ, ನಾನು ಬಿಜಾಪುರದಲ್ಲಿ ಮಾಡಿರ ತಕ್ಕಂಥ ಭಾಷಣದ ಬಗ್ಗೆ ಮಾನ್ಯ ದೇವೇಗೌಡರು ಒಂದು ಪತ್ರ ಬರೆದಿದ್ದಾರೆ, ಅದರಲ್ಲಿ ಅನೇಕ ವಿಷಯುಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಇನ್ನೂ ಉತ್ತರ ಕೊಟ್ಟಿಲ್ಲ; ಸ್ವಲ್ಪ ಕಾಲ ತೆಗೆದು ಕೊಂಡು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ಅವರು ನಿಧಾನವಾಗಿ ಉತ್ತರ ಕೊಡಲಿ; ಆದರೆ ಆ ವಿಷಯು ಇಲ್ಲಿ ಯಾವ ರೀತಿ ಬರುತ್ತದೆಂದು ಅವರು ಕೇಳಿದ್ದಾರೆ ಅದಕ್ಕೆ ಈ ಸದನದ ಉತ್ತರ ಕೊಡುವ ಸ್ಥಿತಿಯಲ್ಲಿರಬೇಕಾಗುತ್ತದೆ. ನಮ್ಮೆಲ್ಲರ ಅಭಿಪ್ರಾಯದಲ್ಲಿ ಅವರಿಬ್ಬರ ಪತ್ರವ್ಯವಹಾರ ಕೇವಲ ಕ್ಷೇಮ-ಸಮಾಚಾರಕ್ಕೆ ಸಂಬಂಧಪಟ್ಟಿದ್ದಲ್ಲ; ಅದು ಈ ರಾಜ್ಯಕ್ಕೆ ಸಂಬಂಧಪಟ್ಟ ವಿಚಾರವಾಗಿದೆ. ಅದು ಅವರುಗಳ ಸ್ವಂತ ವಿಚಾರವಾಗಿದ್ದರೆ ನಿಧಾನವಾಗಿ ಉತ್ತರ ಕೊಡಲಿ, ಅಥವಾ ಜಾಗ್ರತೆ ಉತ್ತರ ಕೊಡಲಿ; ಅದು ಬೇರೆ ಮಾತು. ಆದರೆ ಈ ವಿಷಯ ನೇರವಾಗಿ ಸಾರ್ವಜನಿಕರಿಗೆ ಸಂಬಂಧಪಟ್ಟ ವಿಚಾರವಾಗಿದೆ. ಆದಕಾರಣ ಇದು ಸ್ವಂತ ವಿಷಯ ಎಂದು ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ, ಅದು ಸರಿಯಲ್ಲ; ಮುಖ್ಯಮಂತ್ರಿಗಳ ವಿಚಾರದಲ್ಲಿ ನನಗೆ ಈ ಸಂದರ್ಭದಲ್ಲಿ ಸಂತೋಷ ಮತ್ತು ಬೇಸರ ಎರಡೂ ಆಗುತ್ತದೆ. ಸಂತೋಷ ಏತಕ್ಕೆ ಆಗುತ್ತದೆಂದರೆ, ನಾವು ಈ ವಿಚಾರವನ್ನು ಇಂದು ಪ್ರಸ್ತಾಪ ಮಾಡುವಾಗ ಅವರು ಇಲ್ಲಿ ಹಾಜರಿರುವುದು; ಬೇಸರ ಏತಕ್ಕೆ ಆಗುತ್ತದೆಂದರೆ, ಈ ಮೊದಲೆ ಅವರು ಏತಕ್ಕೆ ಈ ಬಗ್ಗೆ ಹೇಳಿಕೆಯನ್ನು ಕೊಡಲಲ್ಲ ಎಂದು; ಆಗ ಅವರು ಹೇಳಿದ್ದು ಹೇಳಿಕೆಯಲ್ಲ; ಅವರು ಈ ಮೊದಲೇ ಹೇಳಿಕೆ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಮತ್ತು ಹೇಳಿಕೆಯನ್ನು ಕೊಟ್ಟು ಈ ಸಮಸ್ಯೆಯನ್ನು ಬಗೆಹರಿಸಬಹುದಾಗಿತ್ತು. ಆದರೆ ಆ ರೀತಿ ಅವರು ಮಾಡಲಿಲ್ಲ ಅದಕ್ಕೆ ನನಗೆ ಬೇಸರವಾಗುತ್ತಿದೆ. ಇದು ಅವರ ಸ್ವಂತ ವ್ಯವಹಾರವೆಂದು ಅವರು ಹೇಳುವುದಕ್ಕಾಗುವುದಿಲ್ಲ. ಇದು ದೇಶದ ಪ್ರಶ್ನೆಯಾದ್ದರಿಂದ ದಯವಾಡಿ ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಒಂದು ಸತ್ಸಂಪ್ರದಾಯವನ್ನು ಹಾಕಿ ತೋರಿಸಬೇಕು. ಪಶ್ಚಿಮಬಂಗಾಳ ದಲ್ಲಿ ಅಲ್ಲಿಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧಾರ್ಥ ಶಂಕರರಾಯ್ ಅವರು ಅಲ್ಲಿಯ ಕೆಲವು ಮಂತ್ರಿಗಳ ಮೇಲೆ ಆಪಾದನೆ ಬಂದಾಗ ಕೂಡಲೇ ಒಂದು ವಿಚಾರಣಾ ಸಮಿತಿಯನ್ನು ನೇಮಕ ಮಾಡಿದರು. ಅದೇರೀತಿ ತಾವೂ ಸಹ ಮಾಡಿ ನಮ್ಮಿಂದ ಶಕ್ತಿಭಾಷ್‌ಗಿರಿ ತೆಗೆದುಕೊಳ್ಳಿ. ಆ ವಿಚಾರಣಾ ಸಮಿತಿಯಲ್ಲಿ ನೀವು ತಪ್ಪಿತಸ್ಥರಲ್ಲ ಎಂದು ತೀರ್ಮಾನವಾದರೆ ನಿಮ್ಮ ಅಡಳಿತಕ್ಕೆ ನಾವು

(ಶ್ರೀ ಎಸ್. ಬಂಗಾರಪ್ಪ)

ಶಹಭಾಷ್‌ಗಿರಿ ಕೊಡುತ್ತೇವೆ. ಈ ದೃಷ್ಟಿಯಿಂದ ಮಾನ್ಯ ಅಧ್ಯಕ್ಷರು ತಮ್ಮ ರೂಲಿಂಗನ್ನು ಪುನರ್ ಪರಿಶೀಲನೆ ಮಾಡಬೇಕೆ- ವ ತ್ತು ಮುಖ್ಯಮಂತ್ರಿಗಳು ಸಹ ತಮ್ಮ ಸ್ವಯಂ ಭದ್ರತೆಗಾಗಿ ಒಂದು ವಿಚಾರಣಾ ಸಮಿತಿಯನ್ನು ನೇಮಕ ಮಾಡುವ ಬಗ್ಗೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷೀಣಿಯವರೇ, ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ನಾನು ಕೇಳಿದೆ. ಅವರು ಒಂದು ಮಾತನ್ನು ಒಪ್ಪಿಕೊಂಡಿದ್ದಾರೆ. ಏನೆಂದರೆ, ಒಳ್ಳೆಯ ಸಂಪ್ರದಾಯವನ್ನು ತಾಕುವ ದೃಷ್ಟಿಯಿಂದ ಅಧ್ಯಕ್ಷರು ಕೊಟ್ಟಿರುವ ರೂಲಿಂಗನ್ನು ಪುನರ್ ಪರಿಶೀಲನೆ ಮಾಡಿ ಎಂದು ಒತ್ತಾಯ ಮಾಡುವುದು ಯೋಗ್ಯವಲ್ಲ ಎಂದು ; ಆದಕಾರಣ ಅವರ ರೂಲಿಂಗಿಗೆ ನಾವು ತಲೆಬಾಗಿ ನಡೆದುಕೊಳ್ಳಬೇಕಾಗಿದೆ ಎಂದು ಹೇಳಿದರು. ಮತ್ತು ಈ ಕಾರಣದಿಂದ ನಾವು ಏನೂ ಹೇಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಈ ಸಭೆಯ ಕಾರ್ಯಕಲಾಪಗಳನ್ನ ನಡೆಸುವ ಬಗ್ಗೆ ನಾವು ಒಂದು ನಿಯಮಾವಳಿಯನ್ನು ರಚನೆ ಮಾಡಿಕೊಂಡಿರುವುದು ನನಗೆ ಗೊತ್ತಿದೆ ಅದರ ಒಂದು ವ್ಯಾಪ್ತಿಯಲ್ಲಿ ತಮ್ಮ ರೂಲಿಂಗನ್ನು ಪ್ರಶ್ನೆ ಮಾಡುವುದಕ್ಕಾಗುವುದಿಲ್ಲ ವೆಂಬ ದನ್ನು ಸಹ ನಾನು ಒಪ್ಪುತ್ತೇನೆ. ಮತ್ತು ಮುಖ್ಯಮಂತ್ರಿಗಳನ್ನು ಒಳಗೊಂಡು ಈ ಸಭೆಯ ಯಾವ ಸದಸ್ಯರನ್ನೇ ಆಗಲೀ, ನೀವು ಒಂದು ಹೇಳಿಕೆ ಕೊಡಬೇಕು ಎಂದು ಕಡ್ಡಾಯ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಸಹ ನಾನು ತಿಳಿದುಕೊಂಡಿದ್ದೇನೆ. ಆದರೆ ಒಂದು ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ, ಏನೆಂದರೆ ಪ್ರಜಾ ಪ್ರಭುತ್ವದ ತತ್ವಗಳನ್ನು ಒಪ್ಪಿಕೊಂಡಿರುವ ಅನೇಕ ಬಲಿಷ್ಠ ರಾಷ್ಟ್ರಗಳು ಏನಿವೆ, ಅವುಗಳು ಬರಯಿದೇ ಇದ್ದ ರಾಜ್ಯಾಂಗದ ತಳಹದಿಯಮೇಲೆ ಪ್ರಜಾಪ್ರಭುತ್ವವನ್ನು ಬಲವಾಗಿ ಬೆಳೆಸಿಕೊಂಡು ಹೋಗುತ್ತಿರುವ ನ್ಯಾವೇಶನ್ನು ಕಾಣುತ್ತಿದ್ದೇವೆ. ಇವತ್ತು ನಮ್ಮಲ್ಲಿ ಸಹ ಒಂದು ಸಂಪ್ರದಾಯವನ್ನು ಹಾಕಬೇಕು ಎಂದು ಹೇಳತಕ್ಕ ಮುಖ್ಯ ಮಂತ್ರಿಗಳು ತಮ್ಮ ಮೇಲೆ ಒಂದು ಮಾರರ್ ಅಬ್ಲಿಗೇಷನ್ ಇದೆ ಎಂದು ಹೇಳುತಾ ಇಲ್ಲ. It is not a procedural obligation. I an say it is only a moral obligation. The Chief Minister made it clear on the other day when Mr. Bangarapna raised this issue I am going to stand by the statement which I have made in Bijapur. This has been categorically stated by the Chief Minister. ಒಂದು ಸಂಪ್ರದಾಯವನ್ನು ಬೆಳೆಸಿಕೊಂಡು ಹೋಗಬೇಕು, ಉಳಿಸಿಕೊಂಡು ಹೋಗಬೇಕೆಂದು ಹಿರಿಯ ಅಕ್ಕ ಇರುವ ಸಂದರ್ಭದಲ್ಲಿ ತಾವು ಕಾನೂನಿನ ಚೌಕಟ್ಟನ್ನು ತಳ್ಳಿ ಹಾಕುವುದಕ್ಕೆ ಪ್ರಯತ್ನ ಮಾಡಬೇಡಿ ಎಂದು ಕೇಳಿಕೊಳ್ಳುತ್ತೇನೆ ನಿಮ್ಮ ಮೇಲೆ ಮಾರರ್ ಆಬ್ಲಿಗೇಷನ್ ಇದೆ, ಎಲ್ಲಾ ಸದಸ್ಯರೂ ಈ ವಿಷಯದಲ್ಲಿ ಬಹಳ ಆಸಕ್ತಿ ಇಟ್ಟುಕೊಂಡಿದ್ದಾರೆ. ದೇಶದ ಜನತೆಯೂ ಕೂಡ ಸಭೆಯ ಕಾರ್ಯಕಲಾಪಗಳನ್ನು ವೀಕ್ಷಣೆ ಮಾಡುತ್ತಿದ್ದಾರೆ. ತಾವು ಅಧ್ಯಕ್ಷರ ಅನುಮತಿಯನ್ನು ಪಡೆದು ಇದರ ಬಗ್ಗೆ ಉಚಿತವಾದ ಒಂದು ಪರಿಹಾರವನ್ನು ವ್ಯಕ್ತಪಡಿಸಬೇಕೆಂದು ಕೇಳಿಕೊಳ್ಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ವಿರೋಧಪಕ್ಷದ ನಾಯಕರು ಸಂಪ್ರದಾಯದ ವಿಚಾರ ಹೇಳಿದ್ದಾರೆ. ಮತ್ತು ಪ್ರಜಾಪ್ರಭುತ್ವದ ಬಗ್ಗೆ ಪ್ರಸ್ತಾಪ ಮಾಡಿದಾರೆ. ಈ ವಿಷಯ ಎಲ್ಲಿದ ಎಲ್ಲಿಗೋ ಹೋಗುತ್ತಾ ಇದೆ ಎಂದು ಕಾಣುತ್ತಿದೆ. ತಾವು ಇದು ಪ್ರಜಾಪ್ರಭುತ್ವದ ಬಗ್ಗೆ ಅಥವಾ ಸಂಪ್ರದಾಯದ ಮೇಲೆ ಒಂದು ದೊಡ್ಡ ಡಿಬೇಟ್ ಮಾಡಲಿಕ್ಕೆ ಹೋಗಬೇಡಿ.

Sri H. D. DEVE GOWDA.—Even according to convention ;

ಶ್ರೀ ಡಿ. ದೇವರಾಜ ಅರಸ್.—ತಾವು ಕನ್‌ವೆನ್‌ಷನ್ ಕಾನೂನು ಅಥವಾ ವರರ್ ಅಬ್ಲಿಗೇಷನ್ ಎಲ್ಲಾ ಹೇಳಿದ ಬಗ್ಗೆ ನಾನು ತಿಳಿದುಕೊಂಡಿದ್ದೆ, ಪತ್ರಿಕೆಗಳಲ್ಲಿ ಏನಾದರೂ ವಿಚಾರ ಬಂದರೆ ತಮ್ಮಂತಹ ಜವಾಬ್ದಾರಿಯುತರಾದ ವಿರೋಧಪಕ್ಷದ ನಾಯಕರು ಪತ್ರಿಕೆಗಳಲ್ಲಿ ಹೇಳಿಕೆ ಮಾಡಿಕೊಂಡು ಆ ರೀತಿ ಮಾತನಾಡುವುದು ಉತ್ತಮವಾದ ಮತ್ತು ಒಳ್ಳೆಯ ಸತ್ಸಂಪ್ರದಾಯ ಎಂದು. ನಾನು ಹೇಳಿದ್ದು ; ಯಾವುದೋ ಪತ್ರಿಕೆಯಲ್ಲಿ ಬಂದಕೂಡಲೇ ತಾವು ತಮ್ಮ ರಿಯಾಕ್ಷನ್ ಕೊಟ್ಟಿದ್ದೀರಿ I have nothing for or against it, you have a right and you have done it. ತಾವು ವಿರೋಧಪಕ್ಷದ ನಾಯಕರು. ತಾವು ಸತ್ಸಂಪ್ರದಾಯದಂತೆ ನಡೆಯಬೇಕು ಎಂದಿದ್ದರೆ ನನ್ನನ್ನು ಏನು ಹೇಳಿದಿರಿ ಎಂದು ಕೇಳುವುದಕ್ಕಿಂತ ಮುಂಚಿತವಾಗಿ ತಾವು ಪ್ರೆಸ್‌ಗೆ ಹೋಗಿದ್ದೀರಿ. ಇದು ಸತ್ಸಂಪ್ರದಾಯವೇ ಎಂಬುದನ್ನು ತಾವು ಆಲೋಚನೆ

ಮಾಡಬೇಕು. You have gone to the press. I am not questioning it at all. ಸಂಪ್ರದಾಯವನ್ನು ಬೆಳೆಸಬೇಕೆಂದು ತಾವು ಏನು ಹೇಳದ ವೇಳೆ, ಕಾರ್ಯಾನಿನ ಚೌಕಟ್ಟಿನಲ್ಲಿ ನಮ್ಮ ಅನುಮತಿ ಪಡೆದು ತಾವು ಹೇಳಬಹುದಾದ ಅಲ್ಲವೆ? ನಿಜ ಇದು ಯಾವಾಗ ಬರುತ್ತದೆಂದು ಹೇಳಿದರೆ action and reaction are equal and opposite. ಇದರ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೀಗೆ ಹೇಳಿದಾರೆ ಎಂದು ಪತ್ರಿಕೆಗಳಲ್ಲಿ ತಾವು ಕೂಡ ಹೇಳಿದ್ದೀರಿ. ತಾವು ಅದೇ ಹೇಳಿದ್ದೀರೋ ಅಥವಾ ಬೇರೆ ಏನಾದರೂ ಹೇಳಿದ್ದೀರೋ ಅದು ಏನು ಎಂದು ತಿಳಿಯೋಣ ಎಂದು ತಾವು ಯೋಚನೆ ಮಾಡಿದ್ದರೆ ಚೆನ್ನಾಗಿತ್ತು. ಇದನ್ನು ತಾವು ತಿಳಿಯುವುದಕ್ಕೆ ಮುಂಚೆ ಒಂದು ಹೇಳಿಕೆಯನ್ನು ಕೊಟ್ಟಿದ್ದೀರಿ. ನಮಗೆ ಪತ್ರ ಬರೆದಿದ್ದೀರಿ, ಕ್ಲಾರಿಫಿಕೇಷನ್ ಮಾಡಿದ್ದೀರಿ, ತಾವು ಈ ರೀತಿ ಹೋಗಿರುವಾಗ ನಾನೂ ಸ್ವಲ್ಪ ಯೋಚನೆ ಮಾಡಿ ಹೇಳಬೇಕಾಗುತ್ತದೆ. ನಾನು ಇದನ್ನು ಮರೆಮಾಚಬೇಕೆಂದು ಹೇಳುತ್ತಾ ಇಲ್ಲ. ಪತ್ರಿಕೆಗಳಲ್ಲಿ ಬಂದಿರುವುದೇನೋ ಸರಿ, ಆದರೆ ನಾನು ಏನು ಮಾತನ ಡಿದೆನೆ ಎಂಬುದು ಪೂರ್ತಿಯಾಗಿ ಚೇಂಪ್‌ರೆಕಾರ್ಡ್ ಆಗಿದೆ. ಅದನ್ನು ನಾನು ಬದಲಾಯಿಸಿಕೊಳ್ಳುವುದಕ್ಕಾಗಲ್ಲ.

ಶ್ರೀ ಟಿ. ಎಂ. ಮಂಜುನಾಥ್.—ಪಾಟರ್‌ಗೇಟ್ ಮಾಡುವ ಹಾಗಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಯಾವ ಗೇಟೂ ಬೇಕಾಗಿಲ್ಲ. ತಾವು ಹೇಗಾದರೂ ವ್ಯಾಪಾರಸ್ಥರು. ಕೊಬ್ಬರಿ ತೂಕ ಮಾಡಿ ವ್ಯತ್ಯಾಸ ಮಾಡುವ ಜನರು ನೀವು.

ಶ್ರೀ ಟಿ. ಎಂ. ಮಂಜುನಾಥ್.—ನಾನು ಹೇಳಿದ್ದೇ ಜ್ಯಾಸಿಕ ಇಲ್ಲವೆಂದು ಹೇಳುತ್ತೀರಿ.

ಶ್ರೀ ಡಿ. ದೇವರಾಜ ಅರಸ್.—ತಾವು ಮಾತನಾಡುವಾಗ ಹಿಂದುಮುಂದು ಯೋಚನೆ ಮಾಡಿ. ಮಾತನಾಡುವುದು ಒಳ್ಳೆಯದು. ತಾವು ಈಗ 3 ದಿನಗಳಿಂದ ಮಾತನಾಡಿರುವುದನ್ನು ಕೇಳಿದ್ದೇನೆ ಮತ್ತು ತಾವೂ ಕೂಡ ನಾನು ಹೇಳುವುದನ್ನು ಕೇಳಬೇಕು. ನಾನು ಮಾಡಿದ ಸ್ಟೇಟ್ ಎಂದೆ. ಶ್ರೀಮಾನ್ ದೇವೇಗೌಡರಿಗೆ ಉತ್ತರ ಕೊಟ್ಟಮೇಲೆ ಅವರು ಏನು ಹೇಳಬೇಕೋ, ಯಾವರೀತಿ ಹೇಳಬೇಕೋ ಹಾಗೆ ಹೇಳಲಿ. ಸಂಪ್ರದಾಯದ ವಿಚಾರ ಬಂದಿದ್ದರೆ ಹಾಗೆ ಮಾಡಬೇಕಾಗಿತ್ತು. ಅವರ ಇಷ್ಟದ ಪ್ರಕಾರ ಮಾಡಿದ್ದಾರೆ. ಇದರಲ್ಲಿ ನನದೇನೂ ಅಭ್ಯಂತರ ಇಲ್ಲ. ಇವತ್ತಿನ ಸಂದರ್ಭದಲ್ಲಿ ಮೊದಲೇ ತಿಳಿಸಿರುವ ರೀತಿ ಈಗ ನಾನು ಹೇಳಿಕೆಯನ್ನು ಕೊಡುವುದು ಸರಿಯೂ ಅಲ್ಲ, ನೂಕ್ತವೂ ಅಲ್ಲ. ಈ ಸಭೆಯಲ್ಲಿ ಹೇಳಿಕೆಯನ್ನು ಕೊಡಬೇಕಾದ ಅಗತ್ಯವೂ ಕಂಡುಬರುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ —ಮುಖ್ಯ ಮಂತ್ರಿಗಳು ಒಂದು ಮಾತನ್ನು ಬಳಸಿದ್ದಾರೆ. ಏನೆಂದರೆ ಪತ್ರಿಕೆಯಲ್ಲಿ ಬಂದ ತಕ್ಷಣ ದೇವೇಗೌಡನು ಮತ್ತೊಂದು ಹೇಳಿಕೆಯನ್ನು ಕೊಟ್ಟಿದ್ದಾರೆ ಎಂದು. ಸಂಪ್ರದಾಯದ ಪ್ರಶ್ನೆ ಮಾತನಾಡಿದಾಗ ಮುಖ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ತಮಗೆ ನಾನು ಸ್ಪಷ್ಟೀಕರಣ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಒಂದೊಂದು ಸಾರಿ ಪತ್ರಿಕಗಳಲ್ಲಿ ಕೂಡ ಪ್ರಕಟಣೆ ಆಗುವಾಗ ಕೆಲವು ವಿಷಯಗಳು ಸರಿಯಾದ ರೀತಿ ಪ್ರಕಟಣೆಯಾಗದಿರುವ ನಿದರ್ಶನಗಳೂ ಇವೆ. ಇಲ್ಲವೆಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ರಿಪೋರ್ಟಿಂಗ್‌ನಲ್ಲಿಯೂ ಕೂಡ ಒಂದೊಂದು ಸಾರಿ ತಪ್ಪು ಆಗ ಹುದು. ಮುಖ್ಯ ಮಂತ್ರಿಗಳ ಈ ಒಂದು ಹೇಳಿಕೆ ಬಂದಮೇಲೆ ನಾನು ಆ ದಿವಸ ಪತ್ರಿಕೆಗೆ ಹೇಳಿಕೆ ಕೊಡುವುದಕ್ಕೆ ಹೋಗಲಿಲ್ಲ. On the 3rd day I have written a letter to the Chief Minister ಒಂದು ವೇಳೆ ಆ ಪತ್ರಿಕೆಯಲ್ಲಿ ಬಂದಿರುವುದು ತಪ್ಪು ವರದಿಯಾಗಿದ್ದರೆ ಪುನಃ ಕಾಂಟ್ರಡಿಕ್ಟ್ ಮಾಡಲಿಕ್ಕೆ ಮುಖ್ಯ ಮಂತ್ರಿಗಳಿಗೆ ಅವಕಾಶ ಕೊಡಬೇಕಾಗುತ್ತದೆ ಎನ್ನುವ ದೃಷ್ಟಿಯಿಂದ 3 ದಿವಸ ನೋಡಿದ್ದೇನೆ. All of a sudden I have not rushed to the Press. I want to make myself clear because we know that in some reporting there will be some mistake. ಮುಖ್ಯ ಮಂತ್ರಿಗಳು ಕಾಂಟ್ರಡಿಕ್ಟ್ ಮಾಡಬೇಕಾಗಿತ್ತು ಎನ್ನುವುದು ನನ್ನ ಭಾವನೆ. I have not harped upon that statement immediately.

Sri D. DEVARAJ URS.—You may justify whatever you have done. I came to Bangalore only after 5 or 6 days. ನಾನು ನೇರವಾಗಿ ಬಿಜಾಪುರದಿಂದ ಇಲ್ಲಿಗೆ ಬರಲಿಲ್ಲ. ಮಂಗಳೂರಿಗೆ ಹೋಗಿ ಬಂದೆ. ಪತ್ರಿಕೆಗಳಲ್ಲಿ ಏನು ಬಂತು ಎಂಬುದನ್ನೂ ನೋಡುವುದಕ್ಕೆ ನನಗೆ ವೇಳೆ ಇರಲಿಲ್ಲ. ಬೇಕಾದ್ದು ನನ್ನ ಭಾಷಣದ ಪುಲ್ ಜೆಕ್ಷ್ಟ್ ಕೊಡೋಣ ಎಂದು ನಮ್ಮನಿದ್ದೆ. ತಾವು ಏನು ಮಾಡುತ್ತೀರಿ ಎಂದು ನಮಗೆ ಏನು ಗೊತ್ತು? There was a possibility for you to have written to me and kept quit.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಮುಖ್ಯ ಮಂತ್ರಿಗಳೂ ಬಹಳ ಸ್ಪಷ್ಟವಾಗಿ ಹೇಳಿ ಮುಗಿಸಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಹೇಳಿದ್ದನ್ನು ಬಹಳ ಸಮಾಧಾನದಿಂದ ಕೇಳಿಕೊಂಡು ಕುಳಿತಿದ್ದೇವೆ. ಮಾನ್ಯ ನಾಗಣ್ಣನವರು ಸೂಕ್ಷ್ಮವಾಗಿ ಒಂದು ಮಾತನ್ನು ಹೇಳಿದರು. ಅದೇನೆಂದರೆ ಶಾಸನ ಸಭೆಯ ವಿರೋಧ ಪಕ್ಷದ ನಾಯಕರು ಒಂದು ಸವಾಲನ್ನು ಹಾಕಿದ್ದಾರೆ. ಆ ಸವಾಲನ್ನು ಒಪ್ಪಿಕೊಳ್ಳುವುದಕ್ಕೆ ಮುಖ್ಯ ಮಂತ್ರಿಗಳು ಸಿದ್ಧವಾಗಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ಹೇಳಬಿಟ್ಟರೆ ಸಾಕು ಎಂದು ಅವರು ಹೇಳಿದ್ದಾರೆ. ವಿರೋಧ ಪಕ್ಷದ ನಾಯಕರು ಒಂದು ಸವಾಲನ್ನು ಹಾಕಿದರೆ ಅದು ದೇಶದ ಮುಂದೆ, ಜನತೆಯ ಮುಂದೆ, ಹಾಕಿದಂತಾಗುತ್ತದೆ. ಈಗ ಹಾಕಿರುವುದು ಇವಾವುದೇ ಖಾಸಗೀ ಜನಗಳ ಮೇಲೆ ಅಲ್ಲ. ಸವಾಲುಹಾಕಿರುವುದು ಆಡಳಿತ ನಡೆಸುತ್ತಾ ಇರತಕ್ಕಂಥ ಸರ್ಕಾರದ ಮೇಲೆ, ಸರ್ಕಾರದ ಮುಖ್ಯ ಮಂತ್ರಿಗಳ ಮೇಲೆ. ಅದುದರಿಂದ ಆ ಸವಾಲನ್ನು ಒಪ್ಪಿಕೊಳ್ಳಬೇಕು ಮತ್ತು ಇಂಥ ಹೊಸ ಸಂಪ್ರದಾಯ ನಮ್ಮ ದೇಶದಲ್ಲಿ ಬೆಳೆದು ಬರಬೇಕು. ಹಿಂದೆ ನಮ್ಮ ಸ್ನೇಹಿತರು 18 ಅಪಾದನೆಗಳನ್ನು ಹೂಡಿ ಅವನ್ನು ರಾಷ್ಟ್ರಪತಿಗಳಿಗೆಕೊಟ್ಟು ಬಂದಿದ್ದರು. ಬರೀ ಅಪಾದನೆಹಾಡುವುದು, ಅವಕ್ಕೆ ಏನೂ ಪರಿಹಾರ ಇಲ್ಲದೆ ಪರ್ಯವಸಾನ ಆಗುವುದು ಇಂಥಾದ್ದು ಈ ಪ್ರಜಾಪ್ರಭುತ್ವದಲ್ಲಿ ಆಗಬಾರದು. ಈಗ ಮಾನ್ಯ ಲೀಡರ್‌ರವರು ಮಾಡಿರುವ ಅಪಾದನೆ ಒಂದೇ ಸಾರಿಗೆ ಮುಕ್ತಾಯಗೊಳ್ಳಬೇಕು. ವಿರೋಧಪಕ್ಷದವರು ಆಡಳಿತಪಕ್ಷದವರ ಮೇಲೆ ಮಾಡುವ ದೂರಿಗೆ ಒಂದು ಪರ್ಯವಸಾನ ಆಗಬೇಕು, ಅಂತಹ ಪ್ರಜಾಪ್ರಭುತ್ವ ಪದ್ಧತಿಯನ್ನು ಅನುಷ್ಠಾನಕ್ಕೆ ತರುವ ಮೂಲ ಉದ್ದೇಶ ಇಟ್ಟುಕೊಂಡು ವಿರೋಧಪಕ್ಷದ ನಾಯಕರು ಆಡಳಿತ ಪಕ್ಷಕ್ಕೆ ಸವಾಲನ್ನು ಎಸೆದಿದ್ದಾರೆ ಎಂಬುದು ನನಗೆ ತಿಳಿದು ಬಂದಿರತಕ್ಕ ವಿಷಯವಾಗಿದೆ. ಆದುದರಿಂದ ಈ ಸವಾಲನ್ನು ತೀರ್ಮಾನ ಮಾಡುವುದಕ್ಕೆ ಸವಾಲನ್ನು ಒರೆಹಚ್ಚುವುದಕ್ಕೆ ಸರ್ಕಾರ ಅವಕಾಶ ಕಲ್ಪಿಸಿಕೊಡಬೇಕೇ ವಿನಹ ಅದನ್ನು ನಾವು ಮಾಡುವುದಕ್ಕಾಗುವುದಿಲ್ಲ. ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಲು ನ್ಯಾಯಾಧೀಶರನ್ನು ನೇಮಿಸಿ, ದಾಖಲೆ ತಿಗಳು ಮತ್ತು ಪುರಾವೆಗಳು ಏನೇನು ಇದೆಯೋ, ಅವನ್ನು ವಿಚಾರಣೆಗೆ ಒಳಪಡಿಸಿ ತೀರ್ಮಾನ ಮಾಡಿ ಎಂದು ಹೇಳುತ್ತಿದ್ದೇವೆ, ದೊರತನಕ ದೂರು ಎಂದು ಹೇಳುವುದಷ್ಟೇ ನಮ್ಮ ಕರ್ತವ್ಯ.

ಶ್ರೀ ಹೆಚ್. ಸಿದ್ದವೀರಪ್ಪ.—ದೊರೆತನಕ ದೂರು, ಕೆರೆತನಕ ಓಟ ಎಂಬಂತೆ.

ಶ್ರೀ ಕಾಗೋಡು ತಿಮ್ಮಪ್ಪ.—ಅದ್ದರಿಂದ ನಮ್ಮ ಕೆಲಸವನ್ನು ನಾವು ನಿರ್ವಹಿಸಿದ್ದೇವೆ. ಮಾಡಿದ ದರಿಗೆ ಒಂದು ಪರ್ಯವಸಾನ ಆಗಬೇಕಾದರೆ, ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು. ನಾವುಮಾಡುವುದಲ್ಲ, ಸರ್ಕಾರದವರು ಮಾಡಿಕೊಡಬೇಕು. ವಿರೋಧಪಕ್ಷದ ನಾಯಕರು ಅನೇಕ ಸಾರಿ ಅಂತಹ ಸವಾಲನ್ನು ಹಾಕಿಬಿಡುತ್ತಾರೆ, ಹಾಗೇ ಮಾಧ್ಯದಲ್ಲಿ ಕೈಬಿಡುತ್ತಾರೆ ಎಂದು ಹೇಳಿರುವುದನ್ನು ಕೇಳಿದ್ದೇವೆ. ಹಿಂದಿನ ಶಾಸನಸಭೆಯಲ್ಲಿ ಪ್ರತಿಯೊಂದು ಸಂದರ್ಭದಲ್ಲೂ ಶ್ರೀಮಾನ್ ಶಿವಪ್ಪನವರು ಸರ್ಕಾರ ರಾಜೀನಾಮೆ ಕೊಡಬೇಕು ಎಂದು ಹೇಳುತ್ತಿದ್ದರು ಅದರಂತೆ ಈ ಒಂದು ಸಂಪ್ರದಾಯ ಆಗಬಾರದು. ಸಾರ್ವಜನಿಕರಿಗೆ ನಾವುಉತ್ತರ ಹೇಳಬೇಕಾಗುತ್ತದೆ. ಸವಾಲು ಹಾಕಿದವರೇ ತೀರ್ಮಾನಕ್ಕೆ ಬರುವ ರೀತಿಯಲ್ಲಿ ಪಟ್ಟು ಹಿಡಿದು ಕುಳಿದುಕೊಳ್ಳಬೇಕು. ಆ ಪಟ್ಟಿಗೆ ಬಂದಿದ್ದೇವೆ ಮೊನ್ನೆ ದೇವೇಗೌಡರು ನುಮ್ಮನೆ ಕೂತಿದ್ದರು.

ಶ್ರೀ ಹೆಚ್. ಡಿ. ದೇವೇಗೌಡ.—ನುಮ್ಮನೆ ಕೂತಿದ್ದರು ಎಂದರೆ ಹೇಗೆ? The ball is in his court. It is not in my court. It is up to him to accept. I want to make myself clear.

ಶ್ರೀ ಕಾಗೋಡು ತಿಮ್ಮಪ್ಪ.—ಇವತ್ತು ಶ್ರೀಮಾನ್ ದೇವೇಗೌಡರು ಹಾಕಿರತಕ್ಕ ಸವಾಲನ್ನು ಸಾಮಾನ್ಯ ಜನರು ಹಾಕಿದ್ದರೆ ಆರೋಚನೆ ಮಾಡಬೇಕಾಗಿರಲಿಲ್ಲ, ಸರ್ಕಾರದ ನಾಯಕರಿಗೆ ಎಷ್ಟು ಅಂತಸ್ತು ಇದೆ ಅಷ್ಟೇ ಅಂತಸ್ತು ವಿರೋಧಪಕ್ಷದ ನಾಯಕರಿಗೂ ಇದೆ. ಪ್ರತಿಪಕ್ಷದ ನಾಯಕರು ಹಾಕಿದ ಸವಾಲನ್ನು ಸ್ವೀಕಾರ ಮಾಡುವುದು ಆಡಳಿತಪಕ್ಷದ ನಾಯಕರಿಗೆ ಸೇರಿದ ವಿಷಯ. ಮಾನ್ಯ ಅಧ್ಯಕ್ಷರು ಸಭೆಯ ನಿಯಮಾವಳಿಯ ಪ್ರಕಾರ ಏನು ತೀರ್ಮಾನ ಕೊಟ್ಟಿದ್ದಾರೆ ಅದನ್ನು ಉಲ್ಲಂಘನೆ ಮಾಡುವುದಕ್ಕೆ ತಯಾರು ಇಲ್ಲ, ಅವರ ತೀರ್ಮಾನಕ್ಕೆ ಬದ್ಧವಾಗಿದ್ದೇನೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ. ನಿಯಮಾವಳಿಯ ಪ್ರಕಾರ ಮುಖ್ಯಮಂತ್ರಿಗಳನ್ನು ಹೇಳಲೇ ಬೇಕೆಂದು ಒತ್ತಾಯಪಡಿಸುವುದಕ್ಕೆ ಆಗುವುದಿಲ್ಲ ಎಂಬುದು ಗೊತ್ತಿದೆ. ಈ ಸದನದ ಮುಂದೆ ಈಗ ಇರತಕ್ಕಂಥ ವಿಷಯ ವಿರೋಧಪಕ್ಷದ ನಾಯಕರಾದ ದೇವೇಗೌಡರ ಸವಾಲನ್ನು ತಾವು ಒಪ್ಪಿಕೊಳ್ಳುವುದಕ್ಕೆ ಆಗುತ್ತದೆಯೇ? ಇಲ್ಲದಿದ್ದರೆ ಇಲ್ಲ ಎಂದು ಹೇಳುವುದು ಎರಡೇ ಇರುವುದು.

ಮುಖ್ಯಮಂತ್ರಿಗಳು ಒಪ್ಪುವುದಕ್ಕೆ ಆಗುತ್ತದೆ ಅಥವಾ ಆಗುವುದಿಲ್ಲ ಎಂದು ಹೇಳಿಬಿಟ್ಟರೆ ಅಷ್ಟೇ ಸಾಕು. ಒಂದು ವೇಳೆ ಒಪ್ಪಿಕೊಂಡರೆ ಮುಂದೆ ಏನೇನು ಮಾಡಬೇಕು ಎನ್ನುವುದು ಅವರಿಗೆ ಸಂಬಂಧಪಟ್ಟ ವಿಷಯ ಅದಕ್ಕೆ ದಯವಿಟ್ಟು ಅವಕಾಶ ಕೊಡಬೇಕು.

ಅಧ್ಯಕ್ಷರು.—ನಿಮ್ಮಷ್ಟೇ ಸಮಾಧಾನವಾಗಿ ಕೇಳಿದ್ದೇನೆ. ಈ ಸಂದರ್ಭದಲ್ಲಿ ಅವರು ಏನೂ ಹೇಳುವುದಕ್ಕೆ ಸಾಧ್ಯ ಇಲ್ಲ ಎಂದು ಹೇಳಿದ್ದನ್ನು ಕೇಳಿದ್ದೇನೆ. ಮೂರು ದಿವಸಗಳಿಂದ ಇದುವರೆಗೆ ಹೊತ್ತು ಕಳೆದದ್ದು ಸಾಕು. ಮುಸೂದೆ ಚರ್ಚೆಯನ್ನು ತೆಗೆದು ಕೊಳ್ಳಬೇಕಾಗಿದೆ. ದಯಮಾಡಿ ಸದನದಲ್ಲಿ ಕೆಲಸಮಾಡುವುದಕ್ಕೆ ಅನುವು ಮಾಡಿಕೊಡಿ. ಖಡಾಖಂಡಿತವಾಗಿ ಈ ಸಂದರ್ಭದಲ್ಲಿ ಸ್ಟೇಟ್‌ಮೆಂಟ್ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದನ್ನು ಸದಸ್ಯರು ಕೇಳಿದ್ದಾರೆ. ನಾನೂ ಕೇಳಿದ್ದೇನೆ. ಮತ್ತೆಮತ್ತೆ ಇದನ್ನೇ ಹೇಳುವುದರಲ್ಲಿ ಏನಾಕಾರಣ ಹೊತ್ತು ಕಳೆಯುಹೋಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ದೇವೇಗೌಡರು ನಮ್ಮ ಕೋರ್ಟಿಗೆ ಬಾಲ್ ಎಸೆದಿದ್ದಾರೆ ಎಂದು ಒಂದು ಮಾತು ಹೇಳಿದ್ದಾರೆ. ಕಾಗೋಡು ತಿಮ್ಮಪ್ಪನವರೂ ಹೇಳುತ್ತಿದ್ದಾರೆ, ಅವರು ಸವಾಲು ಹಾಕಿದ್ದಾರೆ, ತಾವು ಒಪ್ಪುತ್ತೀರಾ, ಬಿಡುತ್ತೀರಾ, ಎಂದು.

ಶ್ರೀ ಕಾಗೋಡು ತಿಮ್ಮಪ್ಪ.—ಯಾವ ಬಾಲು ?

ಶ್ರೀ ದೇವರಾಜ ಅರಸ್.—ಜೆನಿಸ್ ಬಾಲ್

Sri S. BANGARAPPA.—The public have become a foot ball. He is kicking to your court and you are kicking to his court. I am referring to foot ball.

Sri D. DEVARAJ URS.—We are simply keeping quiet. You are all kicking it about. That is the position now. ಚೆಂಡು ನನ್ನ ಕೋರ್ಟಿಗೆ ಹಾಕಿದ್ದಾರೆ ಎಂದು ಹೇಳಿದ್ದಾರೆ. ನನ್ನ ಕೋರ್ಟಿಗೆ ದೇವೇಗೌಡರು ಬ್ಯಾಟ್ ಹಿಡಿದುಕೊಂಡು ಎಸೆಯುತ್ತಾರೆ ಎಂದು ಗೊತ್ತಿರಲಿಲ್ಲ. ನಾನೂ ತಯಾರು ಇರಲಿಲ್ಲ. ಪಟ್ಟು ಬಿಡಿಸಿಕೊಳ್ಳಬೇಕು. ಚೆಂಡನ್ನು ಹಿಡಿಯಲೇ, ಚೆಂಡನ್ನು ನಿಮ್ಮ ಕಡೆಗೆ ಕಳಿಸೋಣವೇ. ಪಟ್ಟು ಬಿಡಿಸಿಕೊಂಡು ಮುಂದಕ್ಕೆ ಹೋಗೋಣವೇ ಎಂದು ಯೋಚನೆ ಮಾಡಬೇಕು. ಸವಾಲು ಹಾಕಿದ್ದಾರೆ, ಇದು ಪೊಲಿಟಿಕಲ್ ರೆಸೆಲೂಷನ್ ಎಂದು ಹೇಳುತ್ತೇನೆ ಶ್ರೀ ದೇವೇಗೌಡರು ವಿರೋಧಪಕ್ಷದ ನಾಯಕರೂ ಇದ್ದಾರೆ. ಅಂತಹವರ ಮಟ್ಟದಲ್ಲಿ ಸವಾಲು ಹಾಕಿದಮೇಲೆ ಪಟ್ಟನ್ನು ಬಿಡಿಸಿಕೊಳ್ಳುವುದು ಹೇಗೆ, ಏನು ಮಾಡಬೇಕು? ಒಪ್ಪಬೇಕೇ, ಬಿಡಬೇಕೇ, ಇದನ್ನು ಆಲೋಚನೆ ಮಾಡಲು ಕಾರಾವಕಾಶ ಬೇಡವೇ ? ಸವಾಲು ಹಾಕಿದ್ದಾರೆ, ಒಪ್ಪುತ್ತಿರೋ ಇಲ್ಲವೋ ಎಂದು ಕೇಳಿದರೆ ಹೇಗೆ ? ಪಟ್ಟನ್ನು ಬಿಡಿಸಿಕೊಳ್ಳಬೇಕೋ ಬೇಡವೋ ಎನ್ನುವುದನ್ನು ಯೋಚನೆ ಮಾಡಲು ಟೈಮ್ ಕೊಡಿ, ನೋಡೋಣ. I cannot say anything at this stage. ನಾನು ಉತ್ತರ ಬರೆಯುತ್ತೇನೆಂದು ಹೇಳಿದ್ದೇನೆ. ಉತ್ತರ ಬರೆಯದೇ ನುಮ್ಮನೆ ಕೂತರೆ ಧೈರ್ಯ ಇಲ್ಲ. ಉತ್ತರ ಕೊಡಬಹುದಕ್ಕಾಗುವುದಿಲ್ಲ ಎಂದು ಹೇಳಬಹುದಿತ್ತು. ಉತ್ತರ ಬರೆದ ಮೇಲೆ ಅವರು ಏನು ಹೇಳುತ್ತಾರೆ ನೋಡೋಣ. ಚೆಂಡಾಟ ಆಡುವುದು ಸರಿ, ಅದನ್ನು ಹಿಡಿಯುತ್ತೇನೆ, ಪುನ : ಎಸೆಯುತ್ತೇನೆ, ನೋಡೋಣ.

ಶ್ರೀ ಕೋಣಂದೂರು ಲಿಂಗಪ್ಪ.—ಕಾರಾವಕಾಶವನ್ನು ಕೇಳಿದ್ದಾರೆ. ಕಳೆದ ಒಂದು ವಾರದಿಂದ ಅವರಿಗೆ ಕಾರಾವಕಾಶ ಕೊಟ್ಟಿದೆ. ನಮ್ಮ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಹೇಳಿದ್ದಾರೆ. ಅವರು ಹೇಳಿ ಆಗಿರುವುದರಿಂದ ಈ ಸಂದರ್ಭವನ್ನು ಬಿಟ್ಟರೆ ಅವರನ್ನು ಕೇಳಲು ನಮಗೆ ಯಾವ ಸಂದರ್ಭ ಇದೆ ? ಈ ಸಂದರ್ಭವನ್ನು ಬಿಟ್ಟು ಬೇರೆ ಸಂದರ್ಭದಲ್ಲಿ ಹೇಳುತ್ತೇನೆ ಎಂದು ಹೇಳಿದ್ದಾರೆ. ಬೇರೆ ಸಂದರ್ಭ ಹೆನ್ನಾಗಿರುವುದಿಲ್ಲ. ನಮ್ಮ ವಿರೋಧಪಕ್ಷದ ನಾಯಕರು ಸ್ಪಷ್ಟವಾಗಿ ಸವಾಲನ್ನು ಇಟ್ಟಿದ್ದಾರೆ. ಅದು ಅಕಸ್ಮಾತ್ ಫ್ರೂವ್ ಆಗದೇಹೋದರೆ, ಪಕ್ಷದಿಂದ ಮತ್ತು ರಾಜಕೀಯದಿಂದ ನಿವೃತ್ತಿಯಾಗುತ್ತೇನೆ ಎಂದು ಘೋಷಣೆ ಮಾಡಿದ್ದಾರೆ ಮತ್ತು ಬಹಿರಂಗವಾಗಿ ಹೇಳಿದ್ದಾರೆ. ಸಭೆಯ ನಾಯಕರು ಒಂದು ರೀತಿ ಬೇರೆ ಬೇರೆ ಕಾರಣಗಳನ್ನು ಕೊಟ್ಟು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತಿದ್ದಾರೆ ಎಂದು ನಾನು ಹೇಳಬೇಕಾಗುತ್ತದೆ. ಇದ್ದು ಇಲ್ಲದೆ ಹೋದರೆ ಸವಾಲನ್ನು ನೇರವಾಗಿ ಒಪ್ಪಿಕೊಳ್ಳಬೇಕು. ಬೇರೆ ಯಾವುದಾದರೂ ಸಂದರ್ಭಕ್ಕೆ ಕಾಯಬೇಕಾದ ಅವಶ್ಯಕತೆ ಇರುವುದಿಲ್ಲ. ಇದು ಒಳ್ಳೆಯ ಸಂದರ್ಭ. ಅವರೂ ಕೂಡ ಅಗ್ನಿಪರೀಕ್ಷೆಯಿಂದ ಹೊರಗೆ ಬಂದರೆ ಬಹಳ ತೇಜೋವಂತರಾಗುತ್ತಾರೆ. ಅದು ಇಲ್ಲದೆಹೋದರೆ ಖಮ್ ಆಗುತ್ತದೆ. ಅದು ಆಗುತ್ತದೆ. ಅದುದರಿಂದ ಇಬ್ಬರಿಗೂ ನಲ್ಲುತ್ತದೆ.

3-30 P. M.

ಶ್ರೀ ಡಿ. ದೇವರಾಜ ಅರಸ್.—ಅಗ್ನಿಯೇ ಇಲ್ಲ, ಪರೀಕ್ಷೆ ಎಲ್ಲಿ ಬಂತು ?

ಶ್ರೀ ಕೆ ಲಿಂಗಣ್ಣ.—ಅಗ್ನಿಕುಂಡ ಹಾಕಿದ್ದೇವೆ. ಬೆಂಕಿ ಉರಿಯುತ್ತಿದೆ. ಶ್ರೀ ದೇವೇಗ ಡರ ಸವಾಲನ್ನು ಅಗ್ನಿಕುಂಡವೆಂದು ತಿಳಿದು ಕೊಳ್ಳಬೇಕು. ಅವರ ಸವಾಲನ್ನು ಅಗ್ನಿ ಪರೀಕ್ಷೆಯೆಂದು ಒಪ್ಪಿಕೊಳ್ಳಲೇಬೇಕು. ಕಾನೂನು ಕಾಯಿದೆಗಳನ್ನು ತಂದೊಡ್ಡಿಬಿಟ್ಟು ಜಾರಿ ಕೊಳ್ಳುವುದಕ್ಕೆ ಪ್ರಯತ್ನ ಮಾಡುವುದು ಯೋಗ್ಯವಾದುದಲ್ಲ. ಈಗಲಾ ಸವಾಲನ್ನು ಅಂಗೀಕಾರ ಮಾ ಏತ್ತಾರೆಯೋ ಇಲ್ಲವೊ ಎರಡರಲ್ಲಿ ಒಂದನ್ನು ಹೇಳಬೇಕೆಂದು ತಾವು ಆದೇಶ ಕೊಡ ಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ನಿಯಮಗಳಪ್ರಕಾರ ಈ ರೀತಿ ಮಾಡಿರಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಹಾಗಿದ್ದರೆ ವಿರೋಧಪಕ್ಷದ ನಾಯಕರು ಸವಾಲನ್ನು ಕೈಬಿಡಬೇಕು ಎನ್ನುವ ಪ್ರಸಂಗ ಬರುತ್ತದೆ. ಸ್ವಜನಪಕ್ಷಪಾತ, ಭ್ರಷ್ಟಾಚಾರ ರುಜುವಾತು ಮಾಡುತ್ತೇನೆ, ನ್ನ ಹತ್ತಿರ ಸಾಕ್ಷಿ ಆಧಾರಗಳು ಇವೆ ಎಂದು ಅವರು ಹೇಳುತ್ತಿದ್ದಾರೆ. ನಾನು ರುಜುವಾತು ಮಾಡುವುದಕ್ಕೆ ಸಾಧ್ಯ ಎದೆ ಎಂದು ಹೇಳುವಾಗ ನಿಯಮಗಳ ಇಕ್ಕಟ್ಟು ಇದೆ ಎಂಬ ಕಾರಣದಿಂದ ನಾವು ಏನು ಮಾತಬೇ ಕಾಗುತ್ತದೆ ಎಂದರೆ ಬಾಯಿ ಇದ್ದರೂ ಮೂಕರಾಗಬೇಕಾಗುತ್ತದೆ.

ಅಧ್ಯಕ್ಷರು.—ನಿಮ್ಮ ರೂಲ್ಸ್ ತಿದ್ದುಪಾಟು ಮಾಡಿ ನ ಗೆ ಅಧಿಕಾರ ಕೊಡಿ, ಆಗ ನಾನು ಅವರಿಂದ ಹೇಳಿಕೆ ಕೊಡಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಎಲ್ಲ ರೂಲ್ಸ್ ಸಸ್‌ಪೆಂಡ್ ಮಾಡಲಿಕ್ಕೆ ಅವಕಾಶ ಇದೆ.

Sri D. DEVARAJ URS.—I have an important Bill in the upper House. I have to go there.

ಶ್ರೀ ಎಚ್. ಡಿ. ದೇವೇಗೌಡ.—ಅಲ್ಲಿ ಬಿಲ್ ಇದೆ. ಇಲ್ಲಿ ಬಾಣ ಇದೆ.

ಶ್ರೀ ಎಚ್. ಸಿದ್ದವೀರಪ್ಪ.—ಅವರು ಏನು ಹೇಳಿದರು ಎನ್ನುತಕ್ಕಂಥಾದ್ದು ಈಗ ದೇಶದ ತುಂಬ ಗೊತ್ತಾಗಿದೆ. ಶ್ರೀ ದೇವೇಗೌಡರು ಹೇಳತಕ್ಕಂಥದ್ದು ದೇಶದ ತುಂಬ ಗೊತ್ತಾಗಿದೆ ಮುಖ್ಯ ಮಂತ್ರಿಯವರು ನನಗೆ ಕಾಲಾವಕಾಶ ಕೊಟ್ಟು, ನಾನು ನೋಡಿ ಮಾಡಬೇಕಾಗುತ್ತದೆ ಎಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ದೇವೇಗೌಡರ ಪತ್ರಕ್ಕೆ ಉತ್ತರ ಬರೆಯುತ್ತಾರೆಂದು ಇಲ್ಲಿ ಹೇಳಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಶ್ರೀ ದೇವೇಗೌಡರಿಗೆ ಅನುಭವವಿದೆ. ನಮಗೂ ಅನುಭವವಿದೆ. ಕಾಗದಪತ್ರಗಳನ್ನು ಓದಿ ಎಷ್ಟೋಸಾರಿ ಥಾಲೆಂಬ್‌ಮಾಡಿದ್ದೇವೆ. ಈಗ ಲೋಕಆಯುಕ್ತ, ಮತ್ತು ಲೋಕಪಾಲರ ಬಗ್ಗೆ ಒಂದು ಮಸೂದೆ ಬರುತ್ತದೆ. ಅದರಲ್ಲಿ ಏನು ಮಾಡಬೇಕೆಂದು ಹೇಳಿ. Charges are so readily made and charges are so easily made ಈ ದೇಶದಲ್ಲಿ ನಾವು ಏನು ಅಂದರೂ ಜನ ನಂಬುತಕ್ಕ ಪರಿಸ್ಥಿತಿಗೆ ನಾವು ಒಯ್ಯಬೇಕಾಗಿದೆ. ಪ್ರಜಾಪ್ರಭುತ್ವ ದಲ್ಲಿ ನಾವು ಈವತ್ತು ಇಲ್ಲಿರಬಹುದು. ನಾಳೆ ನೀವು ಇಲ್ಲಿಗೆ ಬರಬಹುದು. ಹೆಲ್ತ್ ಚೆಡೀಷನ್ಸ್ ಮಾಡಬೇಕು ಎಂದು ಎಲ್ಲರೂ ಹೇಳುತ್ತಾರೆ, ಅದುದರಿಂದ ರೂಲ್ಸ್ ಪ್ರಕಾರ ನಾವು ಮಾಡಬೇಕಾದರೆ ಕಾನೂನಿನ ಚೌಕಟ್ಟಿನಲ್ಲಿ ಯಾರನ್ನೂ ಬಾಯಿಬಿಡಿ ಎಂದು ಹೇಳುವುದಕ್ಕೆ ಯಾರಿಗೂ ಅಧಿಕಾರವಿಲ್ಲ ಮುಖ್ಯಮಂತ್ರಿಗಳು ನನ್ನ ವಿವೇಚನೆಯಲ್ಲಿ ನಾನು ತಿಳಿಯುತ್ತೇನೆ, ನಾನು ನನ್ನ ಭಾಷಣವನ್ನು ಜೇಪ್ ರೆಕಾರ್ಡ್ ಮಾಡಿಕೊಂಡಿದ್ದೇನೆ. ನಾನು ತಮಗೆ ಕಾಗದ ಬರೆಯುತ್ತೇನೆ ಎಂದು ಹೇಳಿರಿ ಬೇಕಾದರೆ ದಯವಿಟ್ಟು ಕೇಳಿ, ಈವತ್ತಿಗೂ I have closed the door ಎಂದು ಅವರು ಹೇಳಲಿಲ್ಲ. ಯೋಚನೆ ಮಾಡಿ ಹೇಳುತ್ತೇನೆ ಎಂದು ಹೇಳಿದಾರೆ. ಆದುದರಿಂದ ನಾನು ತಮಗೆ ರಿಕ್ವೆಸ್ಟ್ ಮಾಡಿಕೊಳ್ಳುವುದು ಎಂದರೆ ಸರ್ಕಾರದ ಕೆಲಸ ಮಾಡಲಿಕ್ಕೆ ದಯವಿಟ್ಟು ಅವಕಾಶ ಮಾಡಿ ಕೊಡಿ. ಈವತ್ತಿನ ದಿವಸ ಬಹಳ ಪ್ರಾಮುಖ್ಯವಾಗಿ ಕೆಲವು ಕಾಯಿದೆಗಳನ್ನು ಅಂಗೀಕಾರ ಮಾಡ ಬೇಕಾದುದು ಇದೆ. ದಯವಿಟ್ಟು ಅವಕಾಶಮಾಡಿ ಕೊಡಿ ಎಂದು ಮತ್ತೊಮ್ಮೆ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಶ್ರೀ ಸಿದ್ಧವೀರಪ್ಪನವರು ಹೇಳಿದ್ದನ್ನು ನಾನು ಕೇಳಿ ಮಾನ ಮುಖ್ಯಮಂತ್ರಿಗಳು ಬಲ್ಲು ಇದೆ ಎಂದು ಮೇಲ್ಮನೆಗೆ ಹೋದರು. ನಾನು ತಮಗೆ ಮತ್ತ ಈ ಸಭೆಯ ಮುಖಾಂತರ ದೇಶದ ಜನತೆಗೆ ಒಂದು ವಿಷಯವನ್ನು ತಿಳಿಸಬೇಕಾಗುತ್ತದೆ. ಶಾ ಸಭೆಯ ಕಾರ್ಯಕಲಾಪಗಳನ್ನು ಮುಂದಕ್ಕೆ ತಾಕುವ ಸಂದರ್ಭದಲ್ಲಿ ವಿರೋಧಪಕ್ಷದ ಸದಸ್ಯರು ಜವಾಬ್ದಾರಿಯನ್ನು ಅರಿತು ನಡೆದು ಕೊಳ್ಳಬೇಕಾದುದು ಅವರ ಹೊಣೆಗಾರಿಕೆ ಇದೆ. ಆ ಕೆಲಸ ನಾವು ಮಾಡುತ್ತಿದ್ದೇವೆಯೇ ಇಲ್ಲವೇ ಎನ್ನುವುದನ್ನು ದೇಶದ ಜನತೆಗೆ ತಿಳಿಸಬೇಕಾಗುತ್ತದೆ. ಶಾಸನ ಸಭೆ 12ನೇ ತಾರೀಖು ಪ್ರಾರಂಭವಾದ ದಿವಸದಿಂದ ಬಹುಶಃ ಸರ್ಕಾರದ ಎಲ್ಲಾ ಕಾರ್ಯಕಲಾಪಗಳಲ್ಲಿಯೂ ನಾವು ಪೂರ್ಣ ಸಹಕಾರ ಕೊಟ್ಟಿದ್ದೇವೆ. ಪೊನ್ನೆ ರ್ಯಾಂಡ್ ರಿಫಾರಮ್ಸ್ ಬಿಲ್ ತೆಗೆದುಕೊಂಡಾಗ ನಾವು ಯಾವುದಕ್ಕೂ ಅಡ್ಡಿ ಮಾಡಲಿಲ್ಲ. ಅವತ್ತು ನಿಗದಿ ಯಾವ ಕಾಲದಲ್ಲಿ ಪಾಸ್‌ಮಾಡಿಕೊಟ್ಟಿದ್ದೇವೆ. ಈವತ್ತು ಬಹುಶಃ ನಾನ್ ಅಫಿಶಿಯಲ್‌ಡೇ ಅಂದರೆ, ಸಭೆಯ ಸದಸ್ಯರಿಗೆ ಸೀಮಿತವಾದ ದಿವಸ. ನಮ್ಮ ಹಕ್ಕಿಗೆ ಸಂಬಂಧಪಟ್ಟ ದಿವಸ. ನಾವು ಅದನ್ನು ಈ ಸಂದರ್ಭಕ್ಕೆ ಉಪಯೋಗ ಮಾಡಿಕೊಂಡಿದ್ದೇವೆ. ಸರ್ಕಾರದ ಕಾರ್ಯಕಲಾಪಗಳಿಗೆ ಅಡ್ಡಿಯಾಗುವುದು ಬೇಡ ಎಂದು ಯಾವುದೇ ಸಂಧರ್ಭದಲ್ಲಿ ಅಡ್ಡಿ ತರುವುದಕ್ಕೆ ಪ್ರಯತ್ನ ಮಾಡಿಲ್ಲ. ದೇಶದ ಜನತೆಗೆ ಸಭೆಯ ಮುಖಾಂತರ ಸ್ಪಷ್ಟಪಡಿಸಬೇಕಾಗಿದೆ ನಾವು ಯಾವ ಗಾವರ್ನಮೆಂಟ್ ಬಸಿನೆಸ್‌ಗೂ ಅಡ್ಡಿ ಮಾಡಲಲ. ನಾವು ಶನಿವಾರದ ದಿವಸ ಖಾಸಗಿ ಕಲಾಪಗಳ ಸಂಧರ್ಭವನ್ನು ಉಪಯೋಗಮಾಡಿ ಕೊಂಡಿದ್ದೇವೆ. ವಿರೋಧಪಕ್ಷದವರು ಸಹಕಾರ ಕೊಡುತ್ತಾ ಇಲ್ಲ, ಹಿಂದೆ ಹೋಗುತ್ತಿದ್ದಾರೆ ಎನ್ನುವ ಮಾತನ್ನು ಮುಂದೂಡುವುದು ಯೋಗ್ಯವಲ್ಲವೆಂದು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.— ಎರಡು ಬಿಲ್ ಪಾಸ್‌ಮಾಡಿಬಿಡಿ, ಆಮೇಲೆ ನೀವು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಪಾಸ್‌ಮಾಡುವುದು ಬೇರೆ ವಿಷಯ. ಶ್ರೀ ತಿಮ್ಮಪ್ಪನವರು ಎರಡುಸಾರಿ ಈ ಮಾತನ್ನು ಹೇಳಿದ್ದಾರೆ, ಎನೆಂದರೆ ದೇವೆಗೌಡರು ಥಾರೆಂಡ್‌ನ್ನು ಕೊಟ್ಟುಬಿಡುತ್ತಾರೆ, ಸುಮ್ಮನೆ ಕುಳಿತುಕೊಂಡು ಬಿಡುತ್ತಾರೆಂದು. ಮುಖ್ಯಮಂತ್ರಿಗಳು ಕೋರ್ಟ್‌ನಲ್ಲಿ ಬಾಲು ಇದೆ ಎಂದು ಹೇಳಿದರು, ಅದಕ್ಕೆ ಅವರು ವ್ಯಾಖ್ಯಾನ ಮಾಡಿದರು, ಅದನ್ನು ಹೇಗೆ ಹಿಡಿಯಬೇಕು ಎಂದು ನೋಡಬೇಕಾಗಿದೆ ಎಂದು ಅವರು ಹೇಳಿದಂಥ ವಾದಸರಣಿಯಿಂದ ಅರ್ಥವಾಗುತ್ತದೆ ನನ್ನ ಹತ್ತಿರ ಟೇಪ್ ರೆಕಾರ್ಡ್ ಇದೆ, ನಾನು ಯಾವ ಕಾಂಟೆಕ್ಸ್ಟಿನಲ್ಲಿ ಹೇಳಿದ್ದೇನೆ, ಅದರ ಬಗ್ಗೆ ನಾನು ಇ ಷ್ಟು ವಿವರಣೆ ಕೊಟ್ಟಿಲ್ಲವೆಂದು ಹೇಳಿದರು. He is now trying to sidetrack the issue. ಯಾವ ವಾತಾವರಣಿಯಲ್ಲಿ ಹೇಳಿದ್ದೇನೆ, ಯಾವ ಕಾನ್‌ಟೆಕ್ಸ್ಟ್‌ನಲ್ಲಿ ಹೇಳಿದ್ದೇನೆ. ನನ್ನ ಹತ್ತಿರ ಟೇಪ್ ರಿಕಾರ್ಡ್ ಇದೆ ಎಂದು ಹೇಳಿದಾಗ ಬಹುಶಃ ಅವರಿಗೆ ಈ ಹೊತ್ತು ಅವರ ಚಾಲೆಂಜನ್ನು ಬೇರೆ ಮಾರ್ಗಕ್ಕೆ ತೆಗೆದುಕೊಳ್ಳುತ್ತಿದ್ದಾರೆ, ಅದಕ್ಕೆ ರೂಪುರೇಖೆ ಕೊಡುವುದಕ್ಕೆ ಕಾಲಾವಕಾಶ ಬೇಕಾಗಬಹುದು ಎಂದು ಕಾಣುತ್ತದೆ. ನಾನು ತಮ್ಮಲ್ಲಿ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಬಹುಶಃ ಕಳೆದ ಸಾರಿ ಬಿಜಾಪುರ, ಗುಲ್ಬರ್ಗ ಜಿಲ್ಲೆಗಳಲ್ಲಿ ಜೀಪು ಕೊಡುವ ವಿಚಾರದಲ್ಲಿ ಅವ್ಯವಹಾರ ನಡೆಯಿತು ಎಂದು ರಾಜಿನಾಮೆ ಪತ್ರವನ್ನು ಬರೆದು ತಮ್ಮ ಕೈಗೆ ಕೊಟ್ಟೆ. ಅದು ಸಭೆಯ ನಡವಳಿಕೆಗಳಲ್ಲಿ ರಿಕಾರ್ಡ್ ಆಗಿದೆ. ಖುಲ್ಲಂಖುಲ್ಲಾ ಹೇಳಿಕೆ ಕೊಡುತ್ತೇನೆ. ಈ ಮನೆಯ ಮುಂದೆ ಜನ ಸದಸ್ಯರನ್ನು ನೇಮಕ ಮಾಡಿರಿ ಎಂದೂ ಹೇಳಿದೆ. ನನ್ನ ಲಿಮಿಟೇಷನ್ಸ್‌ನಲ್ಲಿ ನಾನು ಕೆಲಸ ಮಾಡಬೇಕಾಗುತ್ತದೆ. ಕುತ್ತಿಗೆ ಪಟ್ಟಿಗೆ ಕೈ ಹಾಕಿ ಎಳೆದುಕೊಂಡು ಬಂದು ಕೆಲಸ ಮಾಡುವುದಕ್ಕಾಗುವುದಿಲ್ಲ ಪಶ್ಚಿಮ ಬಂಗಾಳದಲ್ಲಿ ಮುತ್ತು ಬೇರೆ ಕಡೆ ಚಪ್ಪಲಿಯಿಂದ ಕೂಡ ಹೊಡೆಯಿದ್ದಾರೆ. ಆ ಕೆಲಸವನ್ನು ನಾನು ಮಾಡುವುದಕ್ಕಾಗುವುದಿಲ್ಲ ದೇವೇಗೌಡ ವಿರೋಧ ಪಕ್ಷದ ನಾಯಕನಾಗಿ ಯಾವ ರೀತಿ ನಡೆಯುತ್ತಾನೆ, ಹದ್ದುಬಸ್ತಿನಲ್ಲಿ ನಡೆಯುತ್ತಾನೆಯೇ ಹೇಗೆ ಎನ್ನುವುದನ್ನು ಕರ್ನಾಟಕದ ಜನ ಅರ್ಥ ಮಾಡಿಕೊಳ್ಳಬೇಕಾಗಿದೆ ಪಶ್ಚಿಮ ಬಂಗಾಳದಲ್ಲಿ ಮುಖ್ಯ ಮಂತ್ರಿಗಳಿಗೆ ಪೇಪರ್ ವೆಟ್ ತೆಗೆದುಕೊಂಡು ಹೊಡೆದರು. ರಕ್ತ ಕಾರುತ್ತಾ ಎಂದು ಓದಿದ್ದೇನೆ, ನಾನು ಅಂಥ ಕೆಲಸಕ್ಕೆ ಹೋಗುವುದಿಲ್ಲ, ಒಂದು ಸತ್ಸಂಪ್ರದಾಯವನ್ನು ತಾಕಬೇಕೆಂದು ಇದ್ದೇನೆ. ಅದಕ್ಕೆ ಮುಖ್ಯ ಮಂತ್ರಿಗಳು ಒಪ್ಪಲಿಲ್ಲವೆಂದರೆ ನಾನೇನು ಮಾಡುವುದಕ್ಕಾಗುವುದಕ್ಕಾಗುತ್ತದೆ? ಈ ಚಾರ್ಜ್ ಶೀಟ್ ಕೊಡುವಾಗ ಮುಖ್ಯ ಮಂತ್ರಿಗಳು ಯಾರನ್ನೂ ಕೇಳಿ ಥಾರೆಂಜ್ ಕೊಡಲಿಲ್ಲ. ಹಿಂದೂ ಪತ್ರಿಕೆಯಲ್ಲಿ ಏನು ಪ್ರಕಟವಾಗಿದೆ ಆ ರೀತಿ ಪ್ರಕಟವಾಗಿರುವುದು ಅವರು ಹೇಳಿದ ಕಾನ್‌ಟೆಕ್ಸ್ಟ್‌ನಲ್ಲಿ ಪ್ರಕಟವಾಗಿಲ್ಲ ಎನ್ನುವುದಾದರೆ. ಕಳೆದ ಶುಕ್ರವಾರ ಶ್ರೀ ಬಂಗಾರಪ್ಪನವರು ಈ

(ಶ್ರೀ ಎಚ್. ಡಿ. ದೇವೇಗೌಡ)

ಪ್ರಶ್ನೆಯನ್ನು ಎತ್ತಿದಾಗ I stand by it ಎಂದು ಹೇಳತಕ್ಕ ಪ್ರಶ್ನೆ ಉದ್ಭವವಾಗುತ್ತಿಲ್ಲ ಯಾವ ಕಾನ್‌ಟೆಕ್ಸ್ಟ್‌ನಲ್ಲಿ ಹೇಳಿದ್ದೇನೆ. ಟೇಪ್ ರಿಕಾರ್ಡ್ ಇದೆ. ಪತ್ರಿಕೆಯಲ್ಲಿ ಸರಿಯಾಗಿ ವರದಿಯಾಗಿಲ್ಲ ಎಂದು ಈ ಸಭೆಗೆ ಅಂದೇ ತಿಳಿಸಬೇಕಾಗಿತ್ತು. ಈ ಹೊತ್ತು ಯಾವ ಕಾನ್‌ಟೆಕ್ಸ್ಟ್‌ನಲ್ಲಿ ಹೇಳಿದೆ ಎಂದು ಟೇಪ್ ರಿಕಾರ್ಡ್ ನೋಡಬೇಕಾಗುತ್ತದೆ. ಉತ್ತರ ಬರೆಯಬೇಕಾಗುತ್ತದೆ. ಯೋಚನೆ ಮಾಡಿ ಬರೆಯಬೇಕು ಪಾರ್ ಹೇಗೆ ಹಂತಿರುಗಿಸಬೇಕು, ಎಂದು ಹೇಳುವಾಗ ಮುಖ್ಯ ಮಂತ್ರಿಗಳು ಅವರ ನಿಲುವನ್ನು ಬೇರೆ ಮಾರ್ಗಕ್ಕೆ ತರುಗಿಸುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ, ಅದಕ್ಕೆ ಕಾರಾವಕಾಶ ಬೇಕಾಗುತ್ತದೆ. ಅದಕ್ಕಾಗಿ ಹೀಗೆ ಹೇಳುತ್ತಿದ್ದಾರೆ ಎಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ನಾನು ಒಂದು ಸ್ಪಷ್ಟೀಕರಣ ಮಾಡಲು ಇಚ್ಛೆಪಡುತ್ತೇನೆ. ನನ್ನ ರಾಜಕೀಯ ಜೀವನವನ್ನು ಪಣವಾಗಿ ಒಡ್ಡಿದ್ದೇನೆ. ಕೇವಲ ಹುಸಿ ಮಾತನ್ನು ನಾನು ಹೇಳುತ್ತಿಲ್ಲ. ಮುಖ್ಯ ಮಂತ್ರಿಯವರಿಗಿಂತ ನಾನು 20 ವರ್ಷ ಚಿಕ್ಕವನು. ಆದರೂ ರಾಜಕೀಯ ಜೀವನದಲ್ಲಿ ಪಣ ತೊಟ್ಟು ಹೇಳಿದಾಗ ಅದು ಹುಸಿ ಮಾತಾಗುವುದಿಲ್ಲ. ನನಗೆ ದ್ವಂದ್ವೀಕರಿಸುವುದಕ್ಕೆ ಯೋಗ್ಯತೆ ಇಲ್ಲದೆ ಇದ್ದರೆ ಕರ್ನಾಟಕದ ರಾಜಕೀಯ ಜೀವನದಲ್ಲಿ ಉಳಿಯುವುದಕ್ಕೆ ಯೋಗ್ಯನಲ್ಲ ಅವರಿಂದ ನಿರ್ಗಮಿಸುತ್ತೇನೆ. ಈ ಹೊತ್ತು ಕೇವಲ ಕಾನೂನು ಚೌಕಟ್ಟಿನ್ನು ಜಾರು ಉತ್ತರವನ್ನು ಕೊಡುವ ಪ್ರಯತ್ನ ಮಾಡುವುದು ಯೋಗ್ಯವಲ್ಲ. ನಾವು ನಿಮಗೆ ಸಾಕಷ್ಟು ಸಹಕಾರ ಕೊಟ್ಟಿದ್ದೇವೆ. ಅಮೆರಿಕಾದಲ್ಲಿ ಅಧ್ಯಕ್ಷರಾಗಿದ್ದ ನಿಕ್ಸನ್ ಅವರು ಜೈಲಿಗೆ ಹೋಗಲಿಲ್ಲ. ಕೊಡುವ ಎರಡು ವರ್ಷ ಕಾಲ ತೆಗೆದುಕೊಂಡರು. ಇವೆಲ್ಲ ನಮಗೆ ಗೊತ್ತಿದೆ. ಅವರು ಎರಡು ವರ್ಷ ಕಾಲ ತೆಗೆದುಕೊಂಡು, ಟೇಪ್ ರಿಕಾರ್ಡ್‌ನಲ್ಲಿದ್ದ ಕೆಲವು ಭಾಗವನ್ನು ತೆಗೆದು ನಂತರ ಕೊಟ್ಟರು. ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಬಗ್ಗೆ ಯಾರೂ ಅನ್ಯಥಾ ಭಾವನೆ ಮಾಡಬಾರದು. ಸರ್ಕಾರಿ ಕಾರ್ಯಕಲಾಪದಲ್ಲಿ ಭಾಗವಹಿಸದೆ. ಏನಾದರೂ ಮಾಡಿ ಸರ್ಕಾರಿ ಕಾರ್ಯಕಲಾಪವನ್ನು ತಡೆ ಹಿಡಿಯಬೇಕು ಎನ್ನುವ ಭಾವನೆ ಇದೆ ಎಂದು ತಿಳಿದುಕೊಳ್ಳಬೇಡಿ. ನಮ್ಮ ಶಕ್ತಿ ಮೀರಿ ಸಹಕರಿಸಿದ್ದೇನೆ. ನಮ್ಮ ಮುಂದೆ ಈಗ ಇರುವುದು ಪ್ರಾಮುಖ್ಯವಾದ ವಿಷಯ. ಈ ಹೊತ್ತು ನನ್ನ ರಾಜಕೀಯ ಜೀವನದ ಪಣ ತೊಟ್ಟಿದ್ದೇನೆ. ಅವರೂ ತೊಟ್ಟಿದ್ದಾರೆ. 'I am going to relinquish my office if he proves' ಎಂದು ಹೇಳಿದ್ದಾರೆ. ನೀವು ಯಾರೂ ಹೇಳಲಿಲ್ಲ. ಅವರೇ ಸ್ವಂತ ಪ್ರೇರಣೆಯಿಂದ ಹೇಳಿದ್ದಾರೆ, ನಾನೂ ನನ್ನ ಸ್ವಂತ ಪ್ರೇರಣೆಯಿಂದ ಹೇಳಿದ್ದೇನೆ. ಈ ವಿಷಯದಲ್ಲಿ ಅಂತಿಮ ನಿರ್ಣಯವಾಗುವವರೆಗೂ ಜನತೆಯಲ್ಲಿ ಏನು ಭಾವನೆ ಇದೆ, ಮಾನ್ಯ ತಿಮ್ಮಪ್ಪನವರು ಹೇಳಿದ ಹಾಗೆ ದೇವೇಗೌಡರು ಸವಾಲನ್ನು ಮಾಡಿ ಹೊರಟು ಹೋಗುತ್ತಾರೆ ಎನ್ನುವ ಭಾವನೆ ಏನಿದೆ ಅದು ನಿವಾರಣೆಯಾಗುವುದಿಲ್ಲ. ಅದು ನಿವಾರಣೆಯಾಗಬೇಕಾಗಿದೆ. ಅದ್ದರಿಂದ ನಾನು ಬೇರೆ ವಿಚಾರಗಳಿಗೆ ಅವಕಾಶ ಕೊಡುವುದಕ್ಕೆ ತಯಾರಾಗಿಲ್ಲ.

Sri H. SIDDAVEERAPPA.—I make an appeal if you don't mind. The issue is not dead, you must understand.

Sri KAGODU THIMMAPPA.—The issue is alive provided the Chief Minister accepts the challenge.

Sri H. SIDDAVEERAPPA.—The issue is still alive. ನಾನು ವಿಚಾರ ಮಾಡುತ್ತೇನೆಂದು ಹೇಳಿದ್ದಾರೆ. ನಾನು ಹೇಳುವುದಾದರೂ ಇಷ್ಟೆ. ಎರಡು ಬಹಳ ಪ್ರಾಮುಖ್ಯವಾದ ಮಸೂದೆಗಳಿವೆ. ನಾನು ಮಂಡಿಸುವುದು ಮಾತ್ರವಲ್ಲ, ಅಗ್ರಿಕಲ್ಚರಲ್ ಯೂನಿವರ್ಸಿಟಿಗೆ ಸಂಬಂಧಪಟ್ಟ ಮಸೂದೆ ಸಹ ಇದೆ. ತಮಗೆಲ್ಲ ಗೊತ್ತಿದೆ ವಿಶ್ವವಿದ್ಯಾಲಯಕ್ಕೆ ಈ ಹೊತ್ತು ದೇಶದಲ್ಲಿ ವ್ಯವಸಾಯಕ್ಕೆ ಪ್ರಾಮುಖ್ಯತೆ ಕೊಡಬೇಕಾಗಿದೆ ಎನ್ನುವುದೂ ಗೊತ್ತಿದೆ. ಮುಖ್ಯವಾದ ಎರಡು ಮಸೂದೆಗಳನ್ನೂ ಪಾಸ್ ಮಾಡಬೇಕೆಂಬ ಉದ್ದೇಶದಿಂದಲೇ ನಥಿಯನ್ನು ಒಂದು ವಾರ ಮುಂದುವರಿಸಲು ಕಾರ್ಯ ಕರಾಪ ಸಲಹಾ ಸಮಿತಿಯಲ್ಲಿ ತೀರ್ಮಾನ ಮಾಡಿದ್ದು. ಈ ಹೊತ್ತು ಈ ಮಸೂದೆಗಳನ್ನು ಪಾಸ್ ಮಾಡಿದರೂ ಯೂನಿವರ್ಸಿಟಿ ಅಸ್ತಿತ್ವಕ್ಕೆ ಬರಬೇಕಾದರೆ ಐದಾರು ತಿಂಗಳಾದರೂ ಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಓವರ್ ಚೈಂ ಕುರಿತು ಕೆಲಸ ಮಾಡುತ್ತೇವೆಂದು ಹೇಳುತ್ತೇನೆ. ಯಾವತ್ತಿಗೂ ಸರ್ಕಾರಕ್ಕೆ ಸಹಕಾರ ಕೊಡುವುದರಲ್ಲಿ ಹಿಂದೆ ಹೋಗಿದ್ದೇವೆಂದು ಮುಖ್ಯ ಮಂತ್ರಿಗಳೂ ಹೇಳುವುದಕ್ಕೆ ಸಾಧ್ಯವಿಲ್ಲ, We have given maximum co-operation so far as the Opposition is concerned.

ಶ್ರೀ ಎಚ್. ಸಿದ್ದವೀರಪ್ಪ.—ಎರಡು ಮಸೂದೆಗಳನ್ನು ಪಾಸ್ ಮಾಡುವುದಕ್ಕೆ ಸಹಕಾರ ಕೊಡಿ ಎಂದು ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಸೂದೆಗಳನ್ನು ಪಾಸ್ ಮಾಡುವುದಕ್ಕೆ ಸಹಕಾರ ಕೊಡುವುದರಲ್ಲಿ ಅಭ್ಯಂತರವಿಲ್ಲ. ಸಹಕಾರ ಕೊಡವೆ ಇರುವವರು ನೀವೇ.

ಶ್ರೀ ಡಿ. ದೇವರಾಜ ಅರಸ್.—ನಾನು ಇಲ್ಲದೆ ಇದ್ದಾಗ ಶ್ರೀ ದೇವೇಗೌಡರು ಮಾಡಿದ ಭಾಷಣವನ್ನು ಕೇಳಿದೆ ಅವರ ಅಭಿಪ್ರಾಯದಲ್ಲಿ ನಾವು ಜಾರಿಕೊಂಡು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನಪಡುತ್ತಿದ್ದೇವೆನ್ನುವ ರೀತಿಯಲ್ಲಿ ಹೇಳಿದರು.

ಶ್ರೀ ಎಚ್. ಡಿ. ದೇವೇಗೌಡ.—ಮುಖ್ಯ ಮಂತ್ರಿಗಳು ಕಳೆದ ಶುಕ್ರವಾರದ ದಿನ ಶ್ರೀ ಬಂಗಾರಪ್ಪನವರು ಪ್ರಶ್ನೆಯನ್ನು ಎತ್ತಿದಾಗ I am going to stand by it ಎಂದು ಹೇಳಿದರು. ಆ ಹೊತ್ತೇ ಟೇಪ್ ರಿಕಾರ್ಡ್ ಇದೆ, ಹಾಗೂ ಯಾವ ಕಾನ್‌ಟೆಕ್ಸ್ಟ್‌ನಲ್ಲಿ ಹೇಳಿದೆ ಎನ್ನುವ ವಿವರಣೆಯನ್ನು ಕೊಟ್ಟಿದ್ದರೆ ಈ ಪ್ರಶ್ನೆ ಇಷ್ಟು ದೂರ ಬರುವುದಕ್ಕೆ ಅವಕಾಶವಾಗುತ್ತಿರಲಿಲ್ಲ. ಟೇಪ್ ರಿಕಾರ್ಡ್ ಇದೆ ಎನ್ನುವ ವಿಚಾರ ಈಗ ಬರುತ್ತಿದೆ ಮತ್ತು ಯಾವ ಕಾನ್‌ಟೆಕ್ಸ್ಟ್‌ನಲ್ಲಿ ಹೇಳಿದೆ ಎನ್ನುವುದನ್ನು ನೋಡಬೇಕು ಎಂದೂ ಈಗ ಬರುತ್ತಿದೆ. ಇದನ್ನು ಆ ದಿವಸವೇ ಹೇಳಿದ್ದರೆ ಇದು ಯಾವುದಕ್ಕೂ ಅವಕಾಶವಾಗುತ್ತಿರಲಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಮುಂದೆ ನಾನು ಏನು ಮಾಡುತ್ತೇನೆಯೋ ಗೊತ್ತಿಲ್ಲ ಎನ್ನುವ ಕಾರಣದಿಂದ ವಿರೋಧ ಪಕ್ಷದವರು ನಮಗೆ ಸಹಕಾರ ಕೊಡುವುದಕ್ಕಾಗುವುದಿಲ್ಲವೆಂದು ಹೇಳುವುದಾದರೆ ಅದು ಸರಿಯಲ್ಲ, ಇದುವರೆಗೂ ಅವರು ಸಹಕಾರ ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನಮ್ಮ ಅಭಿನಂದನೆ. ಆದರೆ ಮುಂದೆ ಸಹಕಾರ ಕೊಡಬೇಕಾದೂ, ನೀವು ಕೆಲಸ ಮಾಡಬೇಕಾದೂ, ನಾವು ಕೆಲಸ ಮಾಡಬೇಕಾದ್ದೂ ಇದೆ. ಹಿಂದಿನಿಂದ ನಾವೂ ನೀವೂ ಒಟ್ಟಿಗೆ ಇಷ್ಟು ದಿವಸ ನಡೆಸಿಕೊಂಡು ಬಂದೆವು. ಈಗ ನಮ್ಮದೇನೂ ಜವಾಬ್ದಾರಿ ಇಲ್ಲ, ಸರ್ಕಾರದ್ದೇ ಜವಾಬ್ದಾರಿ ಇದೆ. ಆ ಹೊತ್ತೇ ಹೇಳಿದ್ದರೆ ಏನೂ ಆಗುತ್ತಿರಲಿಲ್ಲ ಎಂದು ಹೇಳಿದರು. ಯಾವ ವಿಚಾರ ಹೇಳಬೇಕಾದ ಅಗತ್ಯವಿತ್ತು ಎಂದು ಅವರು ತಿಳಿದಿದ್ದಾರೆ ಅದನ್ನು ಹೇಳದೆ ಹೋದುದರಿಂದ ಸಹಕಾರ ಕೊಡುವುದಿಲ್ಲವೆನ್ನುವ ರೀತಿಯಲ್ಲಿ ಬಾದ ಸರಣಿಯನ್ನು ಹೂಡುತ್ತೇವೆಂದರೆ ಅದು ಸರಿಯಲ್ಲ. ಆ ಹೊತ್ತೇ ಹೇಳಬೇಕಾಗಿತ್ತು ಎಂದು ಅದನ್ನು ಇಲ್ಲಿ ತೆಗೆದುಕೊಂಡು ಕಡ್ಡಾಯ ಮಾಡುತ್ತೀರಿ ಎನ್ನುವುದು ನನಗೆ ಗೊತ್ತಿರಲಿಲ್ಲ.

ಈಗ ಅಧ್ಯಕ್ಷರು ಈ ವಿಷಯದಲ್ಲಿ ಚರ್ಚೆಯಾದಾಗ ಮುಖ್ಯ ಮಂತ್ರಿಗಳು ಹೇಳಿಕೆ ಕೊಡಬೇಕಾಗಿಲ್ಲ ಎಂದು ತೀರ್ಮಾನ ಕೊಟ್ಟಿದ್ದಾರೆ.ಆದರೂ ಹೇಳಬೇಕು ಎಂದರೆ ನನಗೆ ಅರ್ಥವಾಗುವುದಿಲ್ಲ. ಒಂದು ವೇಳೆ ಅಧ್ಯಕ್ಷರು ಏನಾದರೂ ನಾನು ಹೇಳುವ ವಿಚಾರ ಇದ್ದರೆ ಸ್ಪಷ್ಟೀಕರಣ ಮಾಡಿ ಎಂದು ಹೇಳಿದ್ದರೆ ಅದನ್ನು ಹೇಳಬೇಕೇ ಬೇಡವೇ ಎಂದು ಯೋಚನೆ ಮಾಡಬಹುದಾಗಿತ್ತು. ಅವರು ರೂಲಿಂಗ್ ಕೊಟ್ಟ ಮೇಲೆ ನಾನು ತಿಳಿಯುತ್ತೇನೆ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರು ಈ ಸದನದ ಕಾರ್ಯಕಲಾಪಗಳನ್ನು ನಡಾಯುವುದನ್ನು ಮುಂದುವರಿಸುತ್ತಾರೆ ಎಂದು ನಿರೀಕ್ಷೆಯಿಂದ ಮಾಡುತ್ತೇನೆ. ಅದನ್ನು ಬಿಟ್ಟು ಅವರು ತಮ್ಮ ಬಾದ ಸರಣಿಯನ್ನೇ ಮುಂದುವರಿಸುತ್ತಿದ್ದಾರೆ. ಇಷ್ಟು ದಿವಸ ಸಹಕಾರವನ್ನು ಕೊಟ್ಟು ಈಗ ಕಾರ್ಯಕಲಾಪಗಳಿಗೆ ಅಡ್ಡಿಪಡಿಸುವುದು ಸರಿಯೇ ?

ಶ್ರೀ ಕೋಣಂದೂರು ಲಿಂಗಪ್ಪ.—ಹಾಗಾದರೆ ಹೇಳಿಕೆ ಕೊಡಿ.

ಶ್ರೀ ಡಿ. ದೇವರಾಜ ಅರಸ್.—ಬಲವಂತಕ್ಕೆ ಮಾಫುಸ್ಥಾನ ಮಾಡುತ್ತಾ ಹೋದರೆ ಹೇಗೆ ? ಈ ಬಗ್ಗೆ ಹೇಳಿಕೆ ಸೂಕ್ತವಲ್ಲ. ಹೇಳುವ ಅಗತ್ಯವಿಲ್ಲ ಎಂದು ಹೇಳಿದ ಮೇಲೂ ಈ ಸಭೆಯ ಕಾರ್ಯಕಲಾಪಗಳು ನಡೆಯುದೇ ಹೋದರೆ ಅದಕ್ಕೆ ನೀವೇ ಜವಾಬ್ದಾರರು ಎಂದು ಹೇಳುತ್ತೇನೆ. ಇವನ್ನು ದೇಶದ ಜನತೆ ನೋಡುತ್ತಾರೆ. ಇವರ ಜವಾಬ್ದಾರಿ ಎಷ್ಟರಮಟ್ಟಿಗೆ ಇದೆ ಎಂದು ಬೇರೆ ದೇಶದ ಜನಗಳೂ ಜಡ್ಜ್ ಮಾಡುತ್ತಾರೆ. ಆದ್ದರಿಂದ ಈ ಸಭೆಯ ಕಾರ್ಯಕಲಾಪಗಳಿಗೆ ತಾವು ಅಡ್ಡಿ ಪಡಿಸತಕ್ಕದ್ದು ಸರಿಯಲ್ಲ. ಮುಂದೆ ಈ ಸಭೆಯ ಕಾರ್ಯಕಲಾಪಗಳನ್ನು ನಡೆಯುವುದಕ್ಕೆ ತಮ್ಮ ಸಹಕಾರವನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ.

ಅನೇಕ ಮಾನ್ಯ ಸದಸ್ಯರು.—ಸಹಕಾರ ಕೊಡುವುದಕ್ಕೆ ನಾವು ತಯಾರಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ಸಭೆಯ ಕಾರ್ಯಕಲಾಪಕ್ಕೆ ಯಾವುದೇ ರೀತಿಯಲ್ಲಿ ನಾವು ಅಡ್ಡಿ ಮಾಡಿಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ಏನೂ ಮಾತಿಲ್ಲ, ನಾವೂ ಮಾಡಿಲ್ಲ. ಆದ್ದರಿಂದ ಈಗ ನಾನು ಈ ವಿಧೇಯಕವನ್ನು ಮಂಡಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಮಾನ್ಯ ಮಂತ್ರಿಗಳು ನಮ್ಮ ಸಹಕಾರವನ್ನು ಕೋರಿದ್ದಾರೆ. ನಾವು ಇಲ್ಲಿಯ ವರೆಗೂ ಅವರಿಗೆ ಸಹಕಾರವನ್ನು ಕೊಡುವುದರಲ್ಲಿ ಯಾವುತ್ತೂ ಕೂಡ ಹಿಂದೆ ಬಿದ್ದಿಲ್ಲ. ಇದುವರೆಗೂ ನಡೆದದ್ದು ತಮಗೆ ಮನವರಿಕೆಯಾಗಿದೆ. ವಿರೋಧ ಪಕ್ಷದ ನಾಯಕರು ಹಾಕಿರುವಂತ ಸವಾಲನ್ನು ಮಾನ್ಯ ಮುಖ್ಯ ಮಂತ್ರಿಗಳೂ ಒಪ್ಪುತ್ತಾರೋ ಇಲ್ಲವೋ ಎಂಬುದನ್ನು ಹೇಳಬೇಕು. ಸರ್ಕಾರದವರು ಸಹಕಾರ ಕೊಡದೆ ನಮ್ಮಿಂದ ಸಹಕಾರವಿಲ್ಲ ಎಂದು ಹೇಳುವುದು ಸರಿಯಿಲ್ಲ. ಅವೊತ್ತು ನಾವು ತಮಾಷೆಯಿಂದ ಹೇಳುವ ವಿಚಾರ ಇದಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಜವಾಬ್ದಾರಿಯಿಂದ ಹೇಳಿರತಕ್ಕ ಮಾತು. ಆ ಬಗ್ಗೆ ಈ ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಪರೀಕ್ಷೆಗೆ ಳಗಾಗಬೇಕಾದಂತಹ ವಿಷಯದಲ್ಲಿ ಒಂದು ತೀರ್ಮಾನವನ್ನು ಹೇಳುವುದಾದರೆ ಮುಂದಿನ ಎರಡ್ನೆ ಕಾರ್ಯಕಲಾಪಗಳು ಸುಗಮವಾಗಿ ನಡೆಯುತ್ತವೆ. ಪರೀಕ್ಷೆಗೆ ಬರಲು ಹಿಂಜರಿಯುವುದು ಏತಕ್ಕೆ? ಸಾರ್ವಜನಿಕರ ಮುಂದೆ ವಿರೋಧ ಪಕ್ಷದವರ ಮೇಲೆ ತಪ್ಪು ಹೊರಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡಿದರೆ ಅವರು ಸಂಪೂರ್ಣವಾಗಿ ವಿಫಲರಾಗುತ್ತಾರೆ, ಈಗತಾನೆ ಈ ಸಭೆಗೆ ಬಂದಿರುವ ಮಾನ್ಯ ಸಂಸದೀಯ ಸಚಿವರು ಇದನ್ನು ಮನವರಿಕೆ ಮಾಡಿಕೊಳ್ಳಬೇಕು. ಈಗ ನಮ್ಮಿಂದ ಏನೂ ತೊಂದರೆಯಾಗಿಲ್ಲ. ಈಗ ತೊಂದರೆಯಾಗಿರತಕ್ಕದ್ದು ಸರ್ಕಾರದಿಂದ. ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ವಿರೋಧ ಪಕ್ಷದ ನಾಯಕರ ಸವಾಲನ್ನು ಒಪ್ಪಿಕೊಳ್ಳುವುದಾದರೆ ಈ ಸಭೆಯ ಕಾರ್ಯಕಲಾಪಗಳು ಸುಗಮವಾಗಿ ನಡೆಯುತ್ತವೆ. ನಾವು ನಮ್ಮ ಸಹಕಾರವನ್ನು ಕೊಡುವುದಕ್ಕೆ ತಯಾರಾಗಿದ್ದೇವೆ. ಇಲ್ಲದಿದ್ದರೆ ಸರ್ಕಾರದವರು ನಮ್ಮಿಂದ ಸಹಕಾರವನ್ನು ನಿರೀಕ್ಷಣೆ ಮಾಡುವುದು ತಪ್ಪಾಗುತ್ತದೆ.

Sri H. SIDDAVEERAPPA.—I request the hon. Members to put a ban on the discussion of this subject till the two Bills are passed.

ಶ್ರೀ ಎಚ್. ಡಿ. ದೇವೇಗೌಡ.—ನಾವು ಈ ತಿಂಗಳು 7ನೇ ತಾರೀಖಿನವರೆಗೆ ಕುಳಿತುಕೊಳ್ಳುವುದಕ್ಕೆ ಒಪ್ಪಿಕೊಂಡಿರುವ ಪ್ರಕಾರ ರಾತ್ರಿ 9 ಗಂಟೆ ಆಗಲೀ ಸಭೆ ನಡೆಸುವುದಾದರೆ ನಡೆಸಿ ನಾವು ತಯಾರಾಗಿದ್ದೇವೆ.

ಶ್ರೀ ಎಚ್. ಸಿದ್ಧವೀರಪ್ಪ.—ನಾವು ಹಿಂದೆ ರಾತ್ರಿ 11 ಗಂಟೆಯವರೆಗೂ ಕುಳಿತುಕೊಂಡು ಬಿರ್ ಪಾನು ಮಾಡಿಕೊಟ್ಟಿದ್ದೇವೆ.

ಶ್ರೀ ಸಿ. ಬೈರೇಗೌಡ.—ಈಗ ನಮ್ಮ ಕ್ಷೇತ್ರದಲ್ಲಿ ಜನರು ವಿರೋಧ ಪಕ್ಷದವರ ಮೇಲೆ ಆರೋಪಣೆಯನ್ನು ಹೊರಿಸುವುದಕ್ಕೆ ಹೊರಟಿದ್ದಾರೆ. ನನ್ನನ್ನೇ ಕೇಳಿದ್ದಾರೆ. ವಿಧಾನಸಭೆಯಲ್ಲಿ ನೀವು ಆಪಾದನೆ ಮಾಡುತ್ತೀರಿ. ಆ ಮೇಲೆ ಸರ್ಕಾರದವರು ನಿಮ್ಮನ್ನು ಸರಿಮಾಡಿಕೊಳ್ಳುತ್ತಾರೆ ಎಂದು. ಸರ್ಕಾರದ ಮೇಲೆ ನೀವು ಸವಾಲು ಹಾಕುತ್ತೀರಿ, ಆ ಮೇಲೆ ನೀವು ಅವರನ್ನು ಒತ್ತಾಯ ಮಾಡುವುದಿಲ್ಲ, ಅವರು ನಿಮ್ಮನ್ನು ಸರಿ ಮಾಡಿಕೊಳ್ಳುತ್ತಾರೆ ಎಂದು ಆಪಾದನೆ ಮಾಡಿದ್ದಾರೆ. ಆದ್ದರಿಂದ ಈಗ ಮಾನ್ಯ ಮುಖ್ಯ ಮಂತ್ರಿಗಳು ದೋಷಾರೋಪಣೆಯಿಂದ ಮುಕ್ತರಾಗಬೇಕಾದರೆ ಮಾನ್ಯ ವಿರೋಧ ಪಕ್ಷದ ನಾಯಕರ ಸವಾಲಿನ ಬಗ್ಗೆ ಹೇಳಿಕೆ ಕೊಡಬೇಕು.

ಅಧ್ಯಕ್ಷರು.—ಯಾವ ಕಾನೂನು ಪ್ರಕಾರ ಹೇಳಿಕೆ ಕೊಡಬೇಕು?

ಶ್ರೀ ಸಿ. ಬೈರೇಗೌಡ.—ಎಲ್ಲಾ ಸಂದರ್ಭದಲ್ಲಿಯೂ ಕಾನೂನು ನೋಡುತ್ತಾ ಹೋದರೆ ಅದು ದೊಡ್ಡದಾಗುತ್ತದೆ.

ಅಧ್ಯಕ್ಷರು.—ಮೂರು ದಿವಸಗಳಿಂದ ಇದೇ ರೀತಿ ಮಾಡುತ್ತಿದ್ದೀರಿ.

ಶ್ರೀ ಸಿ. ಬೈರೇಗೌಡ.—ಈಗ ದೇಶದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ, ಸ್ವಜನ ಪಕ್ಷಪಾತ, ಕಾರ್ಪೊರೇಷನ್ ನಡೆಯುತ್ತಿದೆ. ಬಂಡವಾಳಶಾಹಿ ಶಕ್ತಿಯಲ್ಲಿ ಎಲ್ಲಾ ನಡೆಯುತ್ತಿದೆ. ಎಲ್ಲಿ ನೋಡಿದರೂ ಇದರ ತಾಂಡವವಾಗಿದೆ. ಇದು ಸಾಮಾನ್ಯ ಮಟ್ಟದಲ್ಲಿ ನಡೆಯುತ್ತಿಲ್ಲ ಎಲ್ಲಾ ಕಡೆಗಳಲ್ಲಿಯೂ ವ್ಯಾಪಕವಾಗಿ ನಡೆಯುತ್ತಿದೆ ಈ ಬಗ್ಗೆ ವಿರೋಧ ಪಕ್ಷದವರೂ ಸರಿಯಾಗಿ ಗಮನ ಕೊಡುತ್ತಿಲ್ಲ ಎಂದು ಜನ ವಿರೋಧ ಪಕ್ಷದವರ ಮೇಲೆ ಆರೋಪಣೆಗಳನ್ನು ಹೊರಿಸುವುದಕ್ಕೆ ಹೊರಟಿದ್ದಾರೆ. ದೇಶದಲ್ಲಿ ಇಂಥಾ ಒಂದು ವಿಶೇಷ ಪರಿಸ್ಥಿತಿ ಉಂಟಾಗಿರುವುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಈ ಸವಾಲನ್ನು ಒಪ್ಪಿಕೊಳ್ಳಬೇಕು.

ಅಧ್ಯಕ್ಷರು.—ಮುಖ್ಯ ಮಂತ್ರಿಗಳು ಹೇಳಿಕೆ ಕೊಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ

Sri S. BANGARAPPA.—In these days charges are freely and readily made.

Sri H. SIDDAVEERAPPA.—What I said was that charges and counter charges are made ; this is an era of charges.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಹಿರಿಯರಾದ ಶ್ರೀಮಾನ್ ಸಿದ್ಧವೀರಪ್ಪನವರು ಈ ಕಡೆ ಕುಳಿತುಕೊಂಡಿದ್ದಾಗ ಬಹಳ ಚಾರ್ಜ್‌ಗಳನ್ನು ಮಾಡುತ್ತಿದ್ದರು. Sri Siddaveerappa has made several charges against the Government then.

Sri H. SIDDAVEERAPPA.—But they were not accepted. Sri Deve Gowda's party did not accept them.

ಶ್ರೀ ಕೋಣಂದೂರು ಲಿಂಗಪ್ಪ.—ಅದಕ್ಕೇ ಆ ಸರ್ಕಾರ ಹೋಯಿತು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಹಿರಿಯರಾದ ಸಿದ್ಧವೀರಪ್ಪನವರು ಹಾಕಿಕೊಟ್ಟಿರುವ ಮೆಲ್ಲಗ್ಗಿಯನ್ನು ಚಾಸೂ ತಪ್ಪದೆ ದೇವರ ದೃಷ್ಟಿಯಿಂದ ಅನುಸರಿಸುತ್ತೇವೆ. ಜೊತೆಗೆ ನನಗೆ ಇನ್ನೊಂದು ವಿಷಯ ನೆನಪು ಬರುತ್ತಿದೆ. ಮುಖ್ಯಮಂತಿಗಳು, ದೇವೇಗೌಡರು ಬಂದ ಪತ್ರಕ್ಕೆ ಉತ್ತರ ಬರೆದರೆ ಸ್ವಂತ ವ್ಯವಹಾರವಾಗುತ್ತದೆ ಎಂದು ಹೇಳಿದರು, treating it as their private correspondence. ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ತಮಿಳುನಾಡಿನಲ್ಲಿ ಮುಖ್ಯಮಂತ್ರಿ ಕರುಣಾನಿಧಿ ಇದ್ದಾರೆ. ಅವರ ಬ್ರದರ್ ಅಣ್ಣಾದುರೈ ಎಂಬವರು ರಾಮಚಂದ್ರನ್ ಅವರು ದೊಡ್ಡ ಅಪವಾದನೆಗಳನ್ನು ಪಟ್ಟಿಮಾಡಿ ಪ್ರೈಮಿನಿಸ್ಟರ್ ಆಫ್ ಇಂಡಿಯಾಗೆ ಮತ್ತು ಪ್ರೈಮಿನಿಸ್ಟರ್ ಆಫ್ ಇಂಡಿಯಾಗೆ ಕೊಟ್ಟರು. ಆಗ ಶ್ರೀಮಾನ್ ಕರುಣಾನಿಧಿಯವರು, ಪ್ರೈಸಿಡೆಂಟ್‌ಗೆ ಪ್ರೈಮಿನಿಸ್ಟರ್‌ಗೆ ಬರೆದಿದ್ದಾರಲ್ಲ, ಅವನು ನನಗೆ ಹೇಳಲಿ ಎಂದು ಹೇಳಬಹುದಾಗಿತ್ತು.

4-00 P. M.

ಅಧ್ಯಕ್ಷರು.—ಒಳ್ಳೆಯ ಕಥೆ ನಿಮಗೆ ಜ್ಞಾಪಕಕ್ಕೆ ಬರುತ್ತದೆ, ಕುಳಿತುಕೊಳ್ಳಿ. It is already 4 O'clock. I request the Minister to move the Bill.

(*Interruptins*)

Sri H. SIDDAVEERAPPA.—I beg leave of the House to...

MEMBERS —No, no.

Sri H. SIDDAVEERAPPA.—I beg leave of the House to move that the University of Health Sciences Bill, 1974, as reported by the Joint Selcet Committee be taken into consideration.

ಶ್ರೀ ಎಸ್. ಬಂಗಾರಪ್ಪ.—ಶ್ರೀ ಕರುಣಾನಿಧಿಯವರು ತಮ್ಮ ಮೇಲೆ ಚಾರ್ಜ್ಸ್ ಬಂದಾಗ ಏನು ಉತ್ತರ ಕೊಟ್ಟರು ಅದು ಬುಕ್‌ಲೆಟ್ ಆಗಿ ಪ್ರೆಸ್‌ಗೆ ರಿಲೀಸ್ ಆಯಿತು ಪತ್ರಿಕೆಗಳಲ್ಲಿ ಪ್ರಕಟಣೆಯಾಗಿ ರೋಡಿನಲ್ಲಿ ಮಾರಾಟವಾಯಿತು.

ಅಧ್ಯಕ್ಷರು.—ಅವರಿಗೆ ಇಷ್ಟ ಬಂತು ಮಾಡಿದರು. ಮುಖ್ಯಮಂತ್ರಿಗಳು ಇದರ ಬಗ್ಗೆ ಏನೂ ಹೇಳುವುದಿಲ್ಲ ಎಂದು ಹೇಳಿದಾಗ ಮಾನ್ಯ ಬಂಗಾರಪ್ಪನವರು ಸಭೆಯಲ್ಲಿ ಇರಲಿಲ್ಲವೇ ? ಈ ಸಭೆಯಲ್ಲಿ ಏನೂ ಹೇಳುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ದೇವೇಗೌಡರು ಹಾಕಿರತಕ್ಕ ಸವಾಲನ್ನು ಒಪ್ಪುವುದಿಲ್ಲ ಎಂದು ಹೇಳಲಿ.

ಅಧ್ಯಕ್ಷರು.—ನೀವು ಹೇಳಿದರಿ ಎಂದು ಅವರ ಕೈಲಿ ಹೇಳಿಸುವದಕ್ಕಾಗುತ್ತದೆಯೇ !

ಶ್ರೀ ಎಚ್. ಡಿ. ದೇವೇಗೌಡ.—ಈಗ ಶ್ರೀಮಾನ್ ಸಿದ್ಧವೀರಪ್ಪನವರಿಗೆ ಡಾಯಿಂಟ್ ಸೆಲೆಕ್ಟ್ ಕಮಿಟಿಯಿಂದ ಬಂದಿರತಕ್ಕ ಹೆರ್ತ್ ಯೂನಿವರ್ಸಿಟಿ ಬಿಲ್ಲನ್ನು ಮೂವ್ ಮಾಡುವುದಕ್ಕೆ ತಾವು ಅದೇಶ ಕೊಟ್ಟಿರಿ. ಅವರು ಹೇಳುವುದಕ್ಕೆ ಪ್ರಯತ್ನ ಮಾಡಿದರು ; ಆಗಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ನನಗೆ ಪತ್ರ ಬರೆಯುವುದಕ್ಕೆ ಎಷ್ಟು ಕಾಲ ಬೇಕೋ ತೆಗೆದುಕೊಳ್ಳಲಿ. ಅವರು ಯಾವ ಯಾವ ರೀತಿ ಯೋಜನೆ ಮಾಡಬೇಕೋ ಆ ರೀತಿ ಮಾಡಿಕೊಳ್ಳಲಿ. ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ವಿರೋಧಿ ಪಕ್ಷದ ಸದಸ್ಯರ ಅಭಿಪ್ರಾಯ ತಿಳಿದುಕೊಂಡಿದ್ದಾರೆ. ಅವರಿಗೆ ಇನ್ನೊಂದು ಮಾರ್ಗವನ್ನು ಸೂಚನೆ ಮಾಡುವಕ್ಕೆ ಇಚ್ಛೆಪಡುತ್ತೇನೆ. ಅವರು, ಸುದ್ದಿವಾದಿಂದ ಟೇಪ್ ರಿಕಾರ್ಡ್ ಇದೆ, ಯಾವ ಕಾಂಟೆಕ್ಸ್ಟ್‌ನ ಮೇಲೆ ಮಾತನಾಡಿದ್ದೇನೆ ಎಂದು ಗೊತ್ತಾಗುತ್ತದೆ ಎಂದು ಹೇಳಿದ್ದಾರೆ. ಆದುದರಿಂದ ದಯವಿಟ್ಟು ಈ ಸಭೆಗೆ ಟೇಪ್ ರಿಕಾರ್ಡ್ ತರಿಸಿ ಪ್ಲೇ ಮಾಡಿಸಿ, ಯಾವ ಕಾಂಟೆಕ್ಸ್ಟ್‌ನ ಮೇಲೆ ಮಾತನಾಡಿದ್ದಾರೆ ಎನ್ನುವ ವಿವರಣೆ ಕೊಡಲಿ, ಚಾರ್ಜಸ್‌ನ್ನು ಒಪ್ಪಿಕೊಳ್ಳುತ್ತೇನೆ ಅಥವಾ ಬಿಡುತ್ತೇನೆ ಎಂದು ಹೇಳಿಕೆ ಕೊಡಲಿ.

ಶ್ರೀ ಕೋಣಂದೂರು ಲಿಂಗಪ್ಪ.—ಇದನ್ನು ನಾವು ಒಪ್ಪಿಕೊಳ್ಳುವುದಿಲ್ಲ. ಈ ರಾಜ್ಯದಲ್ಲಿ ಬರೀ ಕಾಂಗ್ರೆಸ್-ಆರ್, ಕಾಂಗ್ರೆಸ್-ಓ ಅಲ್ಲ ಇರುವುದು. ನಾವೂ ಇದ್ದೇವೆ. ತಾವು ದಯವಿಟ್ಟು ಕೇಳಬೇಕು. ಶ್ರೀಮಾನ್ ದೇವೇಗೌಡರು ಬರಬರುತ್ತಾ ಮುಖ್ಯ ಮಂತ್ರಿಗಳು ಕಾರಾವಕಾಶ ತೆಗೆದುಕೊಳ್ಳಲಿ ಎಂದು ಹೇಳುತ್ತಿದ್ದಾರೆ. ಇವತ್ತಿನ ದಿವಸ ಈಗ, ಇಲ್ಲೇ ಮುಖ್ಯ ಮಂತ್ರಿಗಳು ದೇವೇಗೌಡರ ಚಾರ್ಜಿಂಜನ್ನು ಒಪ್ಪುತ್ತೇನೆ ಅಥವಾ ಇಲ್ಲ ಎಂದು ಹೇಳಬೇಕು. ಇವೆರಡರಲ್ಲಿ ಒಂದು ಇವತ್ತು ಆಗಲೇಬೇಕು. ಅಧ್ಯಕ್ಷರು ಇದಕ್ಕೆ ಅನುವು ಮಾಡಿಕೊಡಬೇಕು.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಸಂಸದೀಯ ವ್ಯವಹಾರಗಳಿಗೆ ಸಂಬಂಧಪಟ್ಟ ಹಾಗೆ ಹೇಳಿದರು. ಸಂಸದೀಯ ಸಚಿವರ ಕರ್ತವ್ಯ ನಾನು ತಿಳಿದುಕೊಂಡಿರುವ ಹಾಗೆ ವಿಧಿ ನಿಯಮಗಳ ಪ್ರಕಾರ ಸಭೆಯ ಕಾರ್ಯಕಲಾಪಗಳನ್ನು ವಿರೋಧ ಪಕ್ಷದವರ ಸಹಕಾರದೊಡನೆ ನಡೆಸಬೇಕು ಎಂದು. ಈಗ ಮಾನ್ಯ ದೇವೇಗೌಡರು ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಅದರಂತೆ ಹಿಂದೆ ಯಾವುದಾದರೂ ವಿಧಾನ ಸಭೆಯಲ್ಲಿ ಅಥವಾ ಲೋಕ ಸಭೆಯಲ್ಲಿ ಮಾಡಿದ್ದಾರೋ ಇಲ್ಲವೋ ಮತ್ತು ಅದರ ಸಂಪ್ರದಾಯಗಳನ್ನು ನೋಡುವುದಕ್ಕೆ ನನಗೆ ಕಾಲಾವಕಾಶ ಕೊಡಿ. ಅನಂತರ ಅವರು ಏನು ಸಲಹೆ ಕೊಟ್ಟಿದ್ದಾರೋ ಆ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ. ಆದುದರಿಂದ ಈಗ ಮಾನ್ಯ ಸಿದ್ಧವೀರಪ್ಪನವರು ಹೇಳಿದಹಾಗೆ ಇದು ನಿತ್ಯ ವಿಚಾರವಾಗುವುದಿಲ್ಲ, ಪೀಠಾಂತ ವಿಚಾರವಾಗಿರುತ್ತದೆ. ಆದುದರಿಂದ ಮುಂದೆ ಸಂಸದೀಯ ಚಾಲಕಟ್ಟಿನಲ್ಲಿ ಇದನ್ನು ನೀವು ಪ್ರಾರಂಭಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀಮಾನ್ ಕೃಷ್ಣ ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಹಿಂದಿನ ಸರ್ಕಾರಗಳ ಮೇಲೆ ನೀವು ಮಾಡಿದ ಅಪಾದನೆಗಳನ್ನು ನೀವು ಮಾಡಿರತಕ್ಕ ಚಾರ್ಜಸ್‌ಗಳನ್ನು ರುಜುವಾತು ಮಾಡುವುದಕ್ಕೆ ಅವಕಾಶ ಕೊಟ್ಟ ಮೇಲೆ ದೂರು ಕೊಟ್ಟವರೇ ಅಪಾದನೆಗೆ ಒಳಗಾದರಿ, ನೀವು ಮಾಡಿದ ದೂರು ರುಜುವಾತು ಆಗಲಿಲ್ಲ, ದೇಶದಲ್ಲಿ ರಾಜಕೀಯ ಅಡಳಿತದಲ್ಲಿರತಕ್ಕವರ ಮೇಲೆ ಅಪಾದನೆ ಮಾಡುವಾಗ ಬಹಳ ಜವಾಬ್ದಾರಿಯಿಂದ ಮಾಡಬೇಕು. ಅಪಾದನೆ ಮಾಡಿದ ಮೇಲೆ ಅಧಿಕಾರದಲ್ಲಿರತಕ್ಕವರು ವಿಚಾರಮಾಡಿ ನ್ಯಾಯಾಂಗ ತನಿಖೆಗೆ ಅವಕಾಶ ಒದಗಿಸಬೇಕು. ಹಿಂದೆ ಶ್ರೀಮಾನ್ ಶಿವಪ್ಪನವರು ರಾಜೀನಾಮೆ ಕೊಡಬೇಕು ಎಂದು ಹೇಳಿದಾಗ ತಾವು ಏನು ಮಾಡಿದರೋ ಅದನ್ನೇ ನಾವು ಈಗ ಮಾಡುತ್ತಿದ್ದೇವೆ. ಈಗ ವಿರೋಧಪಕ್ಷದವರಿಗೆ ಮಾನ್ಯ ಸಿದ್ಧವೀರಪ್ಪನವರು ಪಾಠ ಹೇಳುತ್ತಿದ್ದಾರೆ. ಹಿಂದೆ ತಾವು ಇಲ್ಲಿ ಕುಳಿತಿದ್ದಾಗ ನೀವು ಮಾಡುತ್ತಿದ್ದರೋ, ಇವತ್ತು ನಾವು ಅದನ್ನು ಮಾಡುತ್ತಿದ್ದೇವೆ. ಇವತ್ತು ನೀವೇ ಅಧಿಕಾರಕ್ಕೆ ಬಂದು ಅಲ್ಲಿ ಕುಳಿತು ಕೊಂಡು ಉತ್ತರ ಹೇಳುವುದಕ್ಕೆ ಕಾರಾವಕಾಶ ಕೇಳುತ್ತಿದ್ದೀರಿ. ನೀವು ನಿಷ್ಠಾವಂತರಾದರೆ, ಪ್ರಾಮಾಣಿಕರಾದರೆ ಯಾವ ಅಪಾದನೆಗಳಿಗೆ ಒಳಗಾಗಿದ್ದೀರಿ ಅದಕ್ಕೆ ನಿಂತ ಕಾಲ ಮೇಲೆ, ಕ್ಷಣದಲ್ಲಿ ನಿಮ್ಮ ಸವಾಲನ್ನು ಒಪ್ಪುತ್ತೇವೆ ಅಥವಾ ಇಲ್ಲ ಎಂದು ಹೇಳಿ. ಈ ಕಡೆ ಕುಳಿತಾಗ ಅಪಾದನೆ ಮಾಡಿದವರು, ಅಲ್ಲಿ ಹೋಗಿ ಒಪ್ಪಿಕೊಳ್ಳುವುದಿಲ್ಲ ಎಂದು ಹೇಳಿದರೆ, ಇದು ನಾಚಿಕೆ ಅಲ್ಲ, ಪ್ರಜಾ ಪ್ರಭುತ್ವ. ರಾಜಕೀಯ ಜೀವನದಲ್ಲಿ ಪ್ರಾಮಾಣಿಕವಾಗಿ ತೂಕ ಮಾಡತಕ್ಕ ತಕ್ಕಡಿ ನಮ್ಮ ತಲೆಯ ಮೇಲೆ ಇದೆ. ತೆಲಸಮಾಡುವುದಕ್ಕೆ ವಿಮಾನಾಮೇವ ಮಾಡಿದರೆ, ಪ್ರಜಾಪ್ರಭುತ್ವದ ವ್ಯವಸ್ಥೆ ಎಲ್ಲಿ ನಡೆಯುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ನಾವು ತೆಗೆದುಕೊಳ್ಳತಕ್ಕಂಥ ಕಾರ್ಯಕ್ರಮದ ಪ್ರತಿಯೊಂದು ಹೆಜ್ಜೆಯಲ್ಲಿಯೂಕೂಡ ನಮಗೆ ಸಂತೆಯು ಕಾಣುತ್ತಿದೆ. ರೋಕಯಕ್ಕ ಬರ್‌ನ್ನು ತರುತ್ತಿದ್ದೇವೆಂದು ಹೇಳಿದರೆ ನಮಗೆ ಅದರಲ್ಲಿ ನಂಬಿಕೆ ಇಲ್ಲ, ಇದು ಏನು ತೋರಿಸುತ್ತದೆ ಎಂದರೆ...

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಅಧಿಕಾರಕ್ಕೆ ಬಂದು ಎರಡು ಮೂರು ವರ್ಷಗಳಾಯಿತು, ಇಷ್ಟರೊಳಗೆ ನೀವು ತಂದಿದ್ದರೆ ನಿಮ್ಮ ಶಕ್ತಿ, ನಿಮ್ಮ ನಿಷ್ಠೆ ಎಷ್ಟು ಎಂಬುದನ್ನು ಹೇಳಬಹುದಾಗಿತ್ತು.

ಶ್ರೀ ಎಸ್. ಎಂ. ಕೃಷ್ಣ.—ಈ ಅಪಾದನೆಗಳನ್ನೆಲ್ಲಾ ವಿಚಾರಣೆ ಮಾಡಲು ಒನ್ ಮ್ಯಾನ್ ಕಮಿಟಿ ಮಾಡಲು ಅದು ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಂದೆ ಹೋಗಿದೆ. ಅದು ಪಾರ್ಲಿಗೆ ಬಂದ ಮೇಲೆ ಇಂತಹ ಅಪಾದನೆಗಳು ಏನೇ ಬಂದರೂ ಕೂಡ ಅವನ್ನು ಕಾನೂನು ಬದ್ಧವಾಗಿ ನೋಡತಕ್ಕಂಥ ಜವಾಬ್ದಾರಿಯ ಹೊಣೆಯನ್ನು ಹೋರತಕ್ಕಂಥದ್ದಕ್ಕೆ ಅವರೊಬ್ಬರು ನೇಮಕವಾಗುತ್ತಾರೆ. ಅಂಥ ವರ ಮುಂದೆ ಈ ಎಲ್ಲಾ ಅಪಾದನೆಗಳನ್ನು ಇಡಬಹುದು. ಹಿಂದೆ ಇಂಥದ್ದು ಹಲವಾರು ಬಾರಿ ನಡೆದಿದೆ. ಕೇಂದ್ರದಲ್ಲಿ ಹಿಂದೆ ಪ್ರಧಾನ ಮಂತ್ರಿಗಳು ಹೆಲ್ಮಾ ಫೇತಿ ಕೇಸ್ ಎಂದು ಕಂಡು ಬಂದಾಗ ಈ ರೀತಿ ಒಂದು ವಿಚಾರಣಾ ಮುಂಡಲಿಯನ್ನು ನೇಮಿಸಿದ್ದಾರೆ. ಪ್ರತ್ಯಾಪಸಿಂಗ್ ಕೈರಾನ್‌ರವರ ಹೆಸರನ್ನು ತಾವು ಕೇಳಿರಬಹುದು...

ಶ್ರೀ ಎಚ್. ಡಿ. ದೇವೇಗೌಡ.—ಪ್ರಧಾನ ಮಂತ್ರಿ ದಿವಂಗತ ಜವಾಹರಲಾಲ್ ನೆಹರೂರವರು ಈಗ ನತ್ತು ನ್ಯಗ್ರದಲ್ಲಿದ್ದಾರೆ. ಆ ವಿಷಯವನ್ನು ಈಗ ಏತಕ್ಕೆ ಹೇಳುತಿದ್ದೀರಿ. ಈಗಿನ ನಿಮ್ಮ ಪ್ರಧಾನ ಮಂತ್ರಿಗಳು ರೋಕನಥೆಯಲ್ಲಿ ಏನು ಮಾಡುತ್ತಿದ್ದಾರೆ ಎಂಬುದನ್ನು ಹೇಳಿ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಏನು ಹೇಳುತ್ತಿದ್ದಾರೆ ಎಂಬುದನ್ನು ದಯವಿಟ್ಟು ಸ್ವಲ್ಪ ಕೇಳಿ.

ಶ್ರೀ ಎಸ್. ಎಂ. ಕೃಷ್ಣ.—ದೊಡ್ಡವರು ಅಧಿಕಾರದಲ್ಲಿರುವಾಗ ಅಂಥವರ ಮೇಲೂ ಅಪಾದನೆಗಳು ಬರುತ್ತವೆ. ಅವಕ್ಕೆ ಒಂದು ಕ್ರಮವಿದೆ, ಆ ಕ್ರಮದ ಪ್ರಕಾರ ಹೋದರೆ ಆ ಅಪಾದನೆಗಳನ್ನು ವಿಚಾರಣೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಅದನ್ನು ಬಿಟ್ಟು ನಾವು ಇವತ್ತು ಅಪಾದನೆ ಮಾಡಿದ್ದೇವೆ, ನೀವು ಆ ಸವಾಲನ್ನು ಒಪ್ಪುತ್ತಿರೋ ಇಲ್ಲವೋ ? ಇಷ್ಟಕ್ಕೇ ಹೋದರೆ ಕಾರ್ಯಕಲಾಪವನ್ನು ನಡೆಸುವುದಕ್ಕೆ ಬಿಡುವುದಿಲ್ಲವೆಂದು ಹೇಳಿದರೆ ಹೇಗೆ ? ಇವತ್ತು ಮುಖ್ಯಮಂತ್ರಿಗಳು ಬಿಜಾಪುರದಲ್ಲಿ ಮಾಡಿದ ಭಾಷಣದ ಬಗ್ಗೆ ವಿರೋಧ ಪಕ್ಷದ ನಾಯಕರು ಕಾಗದ ಬರೆದಿದ್ದಾರೆ; ಅದಕ್ಕೆ ಏನು ಮಾಡಬೇಕು, ಬಿಡಬೇಕು ಎನ್ನುವುದರಲ್ಲಿ ಅಧ್ಯಕ್ಷರ ಕೂತಿಯಲ್ಲಿ ಚರ್ಚೆ ಮಾಡಬೇಕು ಅದನ್ನು ಇಲ್ಲಿ ಬಹಿರಂಗವಾಗಿ ಈ ವಿಧೇಶನದಲ್ಲಿ ಚರ್ಚೆ ಮಾಡುವುದಕ್ಕೆ ಆಗುತ್ತದೆಯೇ ? ವಿರೋಧ ಪಕ್ಷದ ಸದಸ್ಯರಲ್ಲಿ 48 ಜನ ಪತ್ರ ಬರೆದು ನಾವು ನಿಮ್ಮ ಮೇಲಿರುವ ಅಪಾದನೆಗಳನ್ನು ರುಜುವಾತು ಮಾಡುತ್ತೇವೆ, ನೀವು ನಮ್ಮ ಸವಾಲನ್ನು ಒಪ್ಪಿಕೊಳ್ಳಬೇಕು ಎಂದ ಕ್ಷಣ ಒಪ್ಪಿಕೊಂಡು ಮಾಡುವುದಕ್ಕಾಗುತ್ತದೆಯೇ ! ನಾಳೆ ದಿವಸ ಮಾನ್ಯ ಕಾಗೋಡು ತಿಮ್ಮಪ್ಪನವರು, ಕೋಣಂದೂರು ಲಿಂಗಪ್ಪನವರು ಬಂಗಾರಪ್ಪನವರು ಅಧಿಕಾರಕ್ಕೆ ಬಂದಕೂಡಲೇ ಅವರ ಕೈಯಿಂದಲೂ ಸಹ ಆ ರೀತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

Sri H. D. DEVE GOWDA.—He is trying to deviate the whole issue.

Sri S. M. KRISHNA.—No, No. I am trying to concentrate on the issue. ಪ್ರಜಾತಂತ್ರದಲ್ಲಿ ಒಂದು ವ್ಯವಸ್ಥೆ ಇದೆ, ಒಂದು ವಿಧಾನವಿದೆ. ನಾವು ನೀವು ಆಳಿಸಿ ಹೋದ ಮೇಲೂ ಕೂಡ ಪ್ರಜಾಪ್ರಭುತ್ವ ಇರುತ್ತದೆ. ಯಾರಿಗೂ ಅಧಿಕಾರ ಶಾಶ್ವತವಲ್ಲ, ಪ್ರಾಮುಖ್ಯವಲ್ಲ. ಆದುದರಿಂದ ನಾವು ಸತ್‌ಸಂಪ್ರದಾಯಗಳನ್ನು ಏನು ಹಾಕಿಕೊಂಡಿದ್ದೇವೆ ಅದರಂತೆ ನಡೆದುಕೊಂಡು ಹೋಗಬೇಕು. ಕಳೆದ ಎರಡು ದಿವಸಗಳಿಂದ ನೀವು ಏನು ಅಭಿವ್ಯಕ್ತಪಡಿಸಿದ್ದೀರಿ ಅದಕ್ಕೆ ನಮ್ಮಲ್ಲೂ ಬೆಂಬಲವಿದೆ, ಅದಕ್ಕೆ ನಮ್ಮ ಸಹಕಾರವಿದೆ. ಆದರೆ ಅದಕ್ಕೆ ಒಂದು ಮಾರ್ಗವುಂಟು, ಅದಕ್ಕೆ ಒಂದು ವಿಧಾನವುಂಟು. ಆದಕ್ಕೆ ನಾವು ನೀವು ಸೇರಿ ಯಾವ ಮಾರ್ಗವಿದೆ ಎನ್ನುವುದನ್ನು ನಿರ್ಧಾರ ಮಾಡೋಣ. ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮತ್ತೊಮ್ಮೆ ಸದಸ್ಯರಲ್ಲ ಸಂಸದೀಯ ವ್ಯವಹಾರ ಸಚಿವನಾಗಿ ಕೇಳಿಕೊಳ್ಳುತ್ತೇನೆ.

Sri K. PUTTASWAMY.—Madam Speaker, this side of the House is completely ignored.

MADAM SPEAKER.—No. The Hon. Minister for Parliamentary Affairs spoke just now.

Sri G. PUTTASWAMY.—Madam, for the last three days we are simply marking the time and we are not proceeding any further with the business of the House. I would appeal to the Chair either we proceed further with the business and if for any reason it is impossible atleast let us go home.

ಶ್ರೀ ಸಿ. ಬೈರೇಗೌಡ.—ಮಾನ್ಯ ಮುತ್ರಿಗಳು ಮಾತನಾಡುತ್ತಾ ರೋಕಯುಕ್ತ ಬರ್ ಬರುತ್ತದೆ, ಇದನ್ನೆಲ್ಲಾ ಅದಕ್ಕೆ ರಫರ್ ಮಾಡಬಹುದೆಂದು ಹೇಳಿದರು. ಆದರೆ ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಸದನವನ್ನು ಒಪ್ಪಿಕೊಂಡಿದ್ದಾರೆಯೇ ಇಲ್ಲವೇ ಎನ್ನುವುದು ಯಾವುದೂ ಸ್ಪಷ್ಟವಾಗಿ ಹೇಳಲಿಲ್ಲ. ಈ ಎರಡರಲ್ಲಿ ಒಂದನ್ನಾದರೂ ಹೇಳಿದ್ದರೆ ಈ ಸಮಸ್ಯೆಯ ಪರಿಹಾರ ಹೇಗೆ ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ದೇವೇಗೌಡರವರು ಸದನವು ಉದ್ದವಾಗುವುದಕ್ಕೆ ಮುಖ್ಯ ಕಾರಣ ಯಾರು ಎಂಬುದನ್ನು ಮಾನ್ಯ ಮಂತ್ರಿಗಳು ಗಮನಿಸಿಲ್ಲವೆಂದು ಕಾಣುತ್ತದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಏನು ವಿಜಾಪುರದಲ್ಲಿ ಭಾಷಣ ಮಾಡಿದರು ಅದು ಎಲ್ಲಾ ಪತ್ರಿಕೆಯಲ್ಲಿಯೂ ಬಂದಿದೆ, ಅದನ್ನು ರಿಜಾಯಿತ್ ಮಾಡುವುದಾಗಿ ಶ್ರೀಮಾನ್ ದೇವೇಗೌಡರವರು ಸದನವನ್ನು ಹಾಕಿದ್ದಾರೆ. ಮಾನ್ಯ ಎಸ್. ಎಂ. ಕೃಷ್ಣರವರು ಅರ್ಥ ಮಾಡಿಕೊಳ್ಳಲಿ ಎಂದು ನಾನು ಈ ವಿಷಯವನ್ನು ಹೇಳುತ್ತಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ಸಂಸದೀಯ ವ್ಯವಹಾರಗಳ ಸಚಿವರು ಬಹಳ ಒಳ್ಳೆಯ ಭಾಷೆಯಲ್ಲಿ, ನಯವಾಗಿ ನಮ್ಮ ಮುಂದೆ ಹೇಳಿದ್ದಾರೆ. ಆದರೆ ಅವರು ಮುಖ್ಯಮಂತ್ರಿಯವರಂಥ ಇವತ್ತು ಗಟ್ಟಿಯಾಗಿರಬೇಕಂಥ ವಿಷಯ ನಮ್ಮ ಮುಂದಿರತಕ್ಕಂಥ ಕಾಲದಲ್ಲಿ ವಿಧಿನಿಯಮಗಳ ಅನುಸಾರವಾಗಿ ಹೋಗಬೇಕೆಂದು ಹೇಳಿದರು. ಅಲ್ಲೇ ರೀತಿ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಅನುಮತಿ ಪಡೆದು ಒಂದು ಹೇಳಿಕೆಯನ್ನು ಕೊಡಬೇಕು. ವಿಧಿನಿಯಮಗಳನ್ನು ಅನುಸರಿಸಿ ಹೋಗಬೇಕೆಂದರೆ ಇದರಲ್ಲಿ ಕ್ರಮ ಯಾವುದು ಅಕ್ರಮ ಯಾವುದು ? ಇಲ್ಲಿಯವರೆಗೆ ಕ್ರಮವಾಗಿಯೇ ನ್ಯಾಯಾಂಗ ತನಿಖೆ ಆಗಬೇಕೆಂದು ನಾವು ಕಾಯುತ್ತಾ ಕುಳಿತಿರುವುದು, ಆದುದರಿಂದ ತಾವು ಒಂದು ಸತ್ ಸಂಪ್ರದಾಯವನ್ನು ಹಾಕಬೇಕು, ಈ ಒಂದು ಅಗ್ನಿ ಪರೀಕ್ಷೆಗೆ ಒಳಪಡಬೇಕೆಂದು ನಾವು ಹೇಳುತ್ತಿರುವುದು.

MADAM SPEAKER.—I would like the Hon. Minister for Parlimentary Affairs to let me know whether we should proceed with the business or what we should do ?

Sri S. M. KRISHNA.—We are bound by certain decisions taken at the Business Advisory Committee. I would appeal to the Chair to proceed with the agenda that has been circulated to the members and if for any reason it is not possible then the only alternative left for us is to adjourni.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಬೇಳಕಕ್ಕಂಥ ಅಭಿಪ್ರಾಯ ಏನೆಂಬುದು ನನಗೆ ಗೊತ್ತಾಗುವುದಿಲ್ಲ; ನಾವು ಈ ಸದನದ ಕಾರ್ಯಕ್ರಮವನ್ನು ಒಪ್ಪಿರುವುದರಿಂದಲೇ ಇಲ್ಲಿ ಭಾಗವಹಿಸುತ್ತಿರುವುದು ; ಆದರೆ ವಿಶೇಷ ಉದ್ದವಾಗಿರುವ ವಿಷಯವನ್ನು ನಾವು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇವೆ. ಏನಾದರೂ ವಿಶೇಷ ಸಂದರ್ಭಗಳಿದ್ದರೆ, ಅವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಆ ಒಂದು ಅವಕಾಶವನ್ನು ಉಪಯೋಗ ಮಾಡಿಕೊಂಡು ನಾವು ಹೇಳುತ್ತಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಶುಕ್ರವಾರದ ದಿವಸ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಸೇರಿತ್ತು. ಅಲ್ಲಿ ನಿರ್ಧಾರವಾದಂತೆ ಇಲ್ಲಿ ಕಾರ್ಯಕ್ರಮಗಳು ನಡೆಯಬೇಕು ಎಂದು ಮಾನ್ಯ ಕೃಷ್ಣ ಅವರು ಹೇಳಿದರು. ಅಂದು ಮೀಟಿಂಗ್ ಸೇರಿದ್ದಾಗ 3 ವಿಶ್ವವಿದ್ಯಾನಿಲಯಗಳಿಗೆ ಸಂಬಂಧಪಟ್ಟ ಬಿಲ್‌ಗಳನ್ನು ಪಾಸ್ ಮಾಡಬೇಕೆಂದು ನಿರ್ಧಾರವಾಗಿತ್ತು. 6ನೇ ತಾರೀಖಿನವರೆಗೆ ಈ ಬಿಲ್‌ಗಳನ್ನು ತೆಗೆದುಕೊಂಡು 7ನೇ ತಾರೀಖು ನಾನಾ-ಅಫಿಷಿಯಲ್ ಬಿಸಿನೆಸ್ ಪ್ರೋಗ್ರಾಮ್ ತೆಗೆದುಕೊಳ್ಳಬೇಕೆಂದು ನಿರ್ಧಾರವಾಗಿತ್ತು. ಅಂದಿನ ಸಭೆಯಲ್ಲಿ ಶನಿವಾರದ ದಿವಸ ಈ ವಿಷಯ ಇಲ್ಲಿ ಪ್ರಸ್ತಾಪಕ್ಕೆ ಬರುತ್ತದೆಂದು ಯಾರೂ ನಿರೀಕ್ಷೆ ಮಾಡಿರಲಿಲ್ಲ. ಶನಿವಾರ ಈ ವಿಷಯ ಪ್ರಸ್ತಾಪ

ದಾದ ಮೇಲೆ ತಾವು ಏನು ರೂಲಿಂಗ್ ಕೊಟ್ಟರಿ, ಅವನ್ನು ಕೊಟ್ಟಮೇಲೆ ಮುಖ್ಯಮಂತ್ರಿಗಳ ನಿಲುವು ಆ ಬಗ್ಗೆ ಏನಿದೆ ಮತ್ತು ಅಲ್ಲಿಂದ ಇಲ್ಲಿಯವರೆಗೆ ಉದ್ಭವಿಸಿರತಕ್ಕಂಥ ಘಟನೆಗಳು ಏನಿವೆ, ಅವುಗಳನ್ನು ಯಾರೂ ಸಹ ನಿರೀಕ್ಷಣೆ ಮಾಡಿರಲಿಲ್ಲ. ಶನಿವಾರದ ದಿವಸ ಮುಖ್ಯಮಂತ್ರಿಗಳು ಇಲ್ಲಿ ಕೊನೆಗಳಿಗೆಯವರೆಗೆ ಹಾಜರಿದ್ದರು. ಅವರು ಆ ದಿನವೇ ಒಂದು ಅಂತಿಮವಾದ ನಿರ್ಣಯ ಕೊಟ್ಟಿದ್ದರೆ ಈ ಘಟನೆ ನಡೆಯುವುದಕ್ಕೆ ಸಾಧ್ಯವಿರಲಿಲ್ಲ.

ಅಧ್ಯಕ್ಷರು.—ನಾನು ರೂಲಿಂಗ್ ಕೊಟ್ಟಮೇಲೆ ಮುಖ್ಯಮಂತ್ರಿಗಳು ಏನು ಮಾಡಬೇಕಾಗಿತ್ತು ?

ಶ್ರೀ ಎಚ್. ಡಿ. ದೇವೇಗೌಡ.—ತಮ್ಮ ರೂಲಿಂಗನ್ನು ಅವರು ಪ್ರಶ್ನೆ ಮಾಡಬೇಕಾಗಿತ್ತು ಎಂದು ನಾನು ಹೇಳುತ್ತಿಲ್ಲ ; ಇದರಲ್ಲಿ ನನ್ನ ಜವಾಬ್ದಾರಿಯಿದೆ ಎಂದು ಅವರು ಹೇಳಬೇಕಾಗಿತ್ತು. ಆ ರೀತಿ ಅವರು ಹೇಳಿದ್ದರೆ ಈ ಸಮಸ್ಯೆ ಅಂದೇ ಮುಗಿದು ಹೋಗುತ್ತಿತ್ತು. ಅವರು ಆ ರೀತಿ ಹೇಳದಿರುವ ಕಾರಣ, ಅಲ್ಲಿಂದ ಇಲ್ಲಿಯವರೆಗೆ ಉದ್ಭವವಾಗಿರತಕ್ಕಂಥ ಸ್ಥಿತಿಗೆ ನಾವು ಕಾರಣರಲ್ಲ ಎಂದು ಹೇಳಬೇಕಾಗಿದೆ, ಈಗ ಮುಖ್ಯಮಂತ್ರಿಗಳನ್ನು ಇಲ್ಲಿಗೆ ಕರೆಸಿ ; ಅವರು ಈ ಬಗ್ಗೆ ಒಂದು ಅಂತಿಮವಾದ ನಿರ್ಣಯ ಹೇಳಲಿ. ಕಮಿಷನ್ ನೇಮಕ ಮಾಡುವುದು, ಅದಕ್ಕೆ ಯಾವ ಜಡ್ಜ್ ನೇಮಕಮಾಡಬೇಕು ಎಂಬತಕ್ಕಂಥ ಪ್ರೊಸೀಜರನ್ನು ಬೇಕಾದರೆ ಅಮೇಲೆ ಮಾಡಿಕೊಳ್ಳಲಿ.

ಶ್ರೀ ಎಚ್. ಸಿದ್ದವೀರಪ್ಪ.—ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ಪ್ರಶ್ನೆ ಇರಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಅದು ಇತ್ತು.

ಶ್ರೀ ಎಸ್. ಎಂ. ಕೃಷ್ಣ.—ಆ ಬಗ್ಗೆ ಮುಖ್ಯಮಂತ್ರಿಗಳು ಏನು ಹೇಳಬೇಕೋ ಅದನ್ನು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ವಾನ್ಯ ದೇವೇಗೌಡರ ನವಾಲಿಗೆ ಒಪ್ಪುತ್ತಾರೋ ಅಥವಾ ಇಲ್ಲವೋ ಎಂಬತಕ್ಕಂಥ ವಿಷಯವನ್ನು ಹೇಳದೆ, ಬೇರೆ ಎಲ್ಲ ವಿಷಯಗಳನ್ನು ಹೇಳಿದ್ದಾರೆ.

ಶ್ರೀ ಎಸ್. ಎಂ. ಕೃಷ್ಣ.—ಆ ವಿಚಾರದಲ್ಲಿ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಅವರ ಸ್ಪಷ್ಟತೆ ನಿಮಗೆ ಅಸ್ಪಷ್ಟತೆಯಾಗಿದೆ. ಆದಕಾರಣ ಈ ಹಂತದಲ್ಲಿ ಸರ್ಕಾರದವರ ಅಭಿಪ್ರಾಯ ಏನಿದೆ ಎಂದರೆ ಬಿಸಿನೆಸ್ ಅಡ್ವೈಜರಿ ಕಮಿಟಿ ಮೀಟಿಂಗ್‌ನಲ್ಲಿ ಆದ ಒಪ್ಪಂದದಂತೆ ಈ ಮನೂವಗಳನ್ನು ಈಗ ತೆಗೆದುಕೊಳ್ಳಬೇಕು. ಅದು ಆಗುವುದಿಲ್ಲವೆಂದು ವಿರೋಧಪಕ್ಷದ ಸದಸ್ಯರುಗಳು ಹೇಳುವುದಾದರೆ, ಒಂದಲ್ಲ ಒಂದು ಕಾರಣದಿಂದ ಅದರ ಹೊಣೆಗಾರಿಕೆ ಅವರುಗಳಿಗೇ ಸೇರಿದ್ದು.

SOME HON. MEMBERS.—No ; No.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರತಿ ಸಂದರ್ಭದಲ್ಲಿಯೂ ನಾವು ಬಿಸಿನೆಸ್ ಅಡ್ವೈಜರಿ ಕಮಿಟಿ ತೀರ್ಮಾನದಂತೆ ಇಲ್ಲಿ ನಡೆದುಕೊಂಡಿದ್ದೇವೆ. ಆದರೆ ಈಗ ಮುಖ್ಯಮಂತ್ರಿಗಳು ಯಾವ ಹೇಳಿಕೆಯನ್ನೂ ಸಹ ಕೊಡದಿರುವುದರಿಂದ ಮುಂದಿನ ವಿಷಯಕ್ಕೆ ಹೋಗುವುದು ಕಷ್ಟವಾಗಿದೆ. ಈ ಕಾರಣದಿಂದ ನಮ್ಮ ಮೇಲೆ ಯಾವ ತಪ್ಪೂ ಸಹ ಇಲ್ಲ.

Sri S. M. KRISHNA.—We are willing to discuss ; we are willing to have a dialogue with you. There is a way to find a solution to the problem, and you shall not have it your own way.

HON'BLE MEMBERS.—No. No.

Sri S. BANGARAPPA.—You must accept the demand of the Opposition !

Sri S. M. KRISHNA.—Time and again it has been proved that no Government can have its own way and time and again it has been proved that no Opposition can have its own way. There is a mid point.

Sri S. BANGARAPPA.—What is the dialogue the Hon'ble Minister has done for all these three days !...

ಶ್ರೀ ಎಸ್. ಎಂ. ಕೃಷ್ಣ.—ಈ ಸರ್ಕಾರವನ್ನು ನಡೆಸತಕ್ಕಂಥ, ರಾಜ್ಯವನ್ನು ನಡೆಸತಕ್ಕಂಥ ಜವಾಬ್ದಾರಿ ಕೇವಲ ನಮ್ಮ ಮೇಲೆ ಇಲ್ಲ ; ಮತ್ತು ಇಟ್ಟಿರುವ ಮನೊವೆಗಳನ್ನು ಇಲ್ಲಿ ಮಂಡಿಸಿ ಪಾಸ್ ಮಾಡಿದ ಮೇಲೆ, ಅವುಗಳು ಜಾರಿಗೆ ಬಂದರೆ, ಅವು ಕೇವಲ ನಮಗೆ ಮಾತ್ರ ಅನ್ವಯ ವಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಎಲ್ಲರಿಗೂ ಅನ್ವಯವಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ಅದಕಾರಣ ಈಗಲೇ ಮುಖ್ಯಮಂತ್ರಿಗಳನ್ನು ಇಲ್ಲಿಗೆ ಕರೆಸಬೇಕೆಂಬ ತುರ್ತು ಏನಿದೆ ? ಬ್ರಿಟೀಷ್ ಹೌಸ್ ಆಫ್ ಕಾಮನ್ಸ್‌ನಲ್ಲಿಯಾಗಲೀ, ಫ್ರೆಂಚ್ ಪಾರ್ಲಮೆಂಟ್‌ನಲ್ಲಿಯಾಗಲೀ ಈ ರೀತಿ ಏನಾದರು ನಡೆದಿದೆಯೇನು ? ಈಗಲೇ ಮಂತ್ರಿಗಳನ್ನು ಕರೆಸಬೇಕು, ಈಗಲೇ ಹೇಳಿಕೆಯನ್ನು ಕೊಡಿಸಬೇಕು ಎಂದು ಕೇಳಿರತಕ್ಕಂಥ ಪ್ರಸಂಗ ಬೇರೆ ವಿಧಾನಸಭೆಗಳಲ್ಲಿ ಏನಾದರೂ ನಡೆದಿದೆಯೇನು ? ಪಾರ್ಲಮೆಂಟಿನಲ್ಲಿ ಸಹ ಈ ರೀತಿ ನಡೆದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—6 ಗಂಟೆಗೆ ಮುಂಚೆ ಏನು ಮಾಡಿದರೂ ರಾಜೀನಾಮೆ ಕೊಡುವುದಿಲ್ಲವೆಂದು ನಿಕ್ಸನ್ ಅವರು ಹೇಳಿದ್ದರು. ಆದರೆ 6 ಗಂಟೆಯ ನಂತರ ತಮ್ಮ ನಿರ್ಧಾರವನ್ನು ಬದಲಾಯಿಸಿ ರಾಜೀನಾಮೆ ಕೊಟ್ಟರು, ಆದರೆ ಇಲ್ಲಿ ಕಳೆದ 3 ದಿವಸಗಳಿಂದ ಚರ್ಚೆ ಮಾಡಿದರೂ ಸಹ ಮುಖ್ಯಮಂತ್ರಿಗಳಿಂದ ಇನ್ನೂ ಉತ್ತರ ಬಂದಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಆ ಪ್ರಕರಣ ಕೇವಲ 6 ಗಂಟೆಗಳಲ್ಲಿ ತೀರ್ಮಾನವಾಗಲಿಲ್ಲ ; ಕಳೆದ ಎರಡೂಮೂಕ್ಕಾಲು ವರ್ಷಗಳಿಂದ ಅದು ನಡೆದುಕೊಂಡು ಬಂದಿತ್ತು. ಆದರೆ ತಾವು ಇಲ್ಲಿ ಕೇವಲ 12 ಗಂಟೆಗಳಲ್ಲಿ ಇವನ್ನು ತೀರ್ಮಾನ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ.

ಶ್ರೀ ಎಚ್. ಡಿ. ದೇವೇಗೌಡ.—ಅವರು ಕೇವಲ 6 ಗಂಟೆಗಳಲ್ಲಿ ತಮ್ಮ ಆಟಿಟ್ಯೂಡನ್ನು ಬದಲಾವಣೆ ಮಾಡಿದರು.

ಶ್ರೀ ಎಸ್. ಬಂಗಾರಪ್ಪ.—ಅಂದರೆ ಸರ್ಕಾರದವರು ಈ ಬಗ್ಗೆ ಉತ್ತರ ಕೊಡಲು ಕೊನೆಯ ಪಕ್ಷ ಎರಡೂವರೆ ತಿಂಗಳನ್ನು ತೆಗೆದುಕೊಳ್ಳುತ್ತಾರೆಂದು ಕಾಣುತ್ತದೆ. ಈಗ ಮಾನ್ಯ ಮಂತ್ರಿಗಳು ಮಾತನಾಡುತ್ತಾ ಈ ರೀತಿ ಬೇರೆ ಅಸೆಂಬ್ಲಿಗಳಲ್ಲಿ ನಡೆದಿದೆಯೇ ಎಂದು ಕೇಳಿದರು. ಹಾಗಿದ್ದರೆ ಯಾವುದೇ ವಿಧಾನಸಭೆಯಲ್ಲಿಯಾಗಲೀ, ಪಾರ್ಲಮೆಂಟಿನಲ್ಲಿಯಾಗಲೀ ಯಾವುದಾದರು ಹೇಳಿಕೆಯನ್ನು ಕೊಡಲು ಅಲ್ಲಿಯ ಸರ್ಕಾರದವರು 3-4 ದಿವಸಗಳ ಕಾಲಾವಕಾಶವನ್ನು ತೆಗೆದುಕೊಂಡಿರತಕ್ಕಂಥ ಉದಾಹರಣೆಯನ್ನು ತೋರಿಸುತ್ತೀರಾ ? ಇದೇ ಮೊದಲನೆಯ ಸಲ ಈ ರೀತಿಯಾಗುತ್ತಿರುವುದು.

Sri S. M. KRISHNA.—If there is a substantial motion before the Assembly, then I can understand the Chief Minister being called to make a categorical statement. There is no motion before the House.

Sri H. D. DEVE GOWDA.—Under Rule 312 my friend Sri K. H. Hanume Gowda has sent a notice of motion.

Sri S. M. KRISHNA.—Has it been allowed ? If it has been allowed and if time has been fixed to it by the Business Advisory Committee, I will bow down to it.

MADAM SPEAKER.—No motion is allowed. Who has permitted it ? There was a motion and I have ruled it out.

Sri S. M. KRISHNA.—When the Speaker herself says that motion under rule 312 has been ruled out, how does members except the Leader of the House to violate the Speaker's Ruling ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಏನೆಂದರೆ ಅವರು ವಿರೋಧಪಕ್ಷದ ನಾಯಕರ ಮೇರಾಗಲೀ ನಮ್ಮ ಮೇರಾಗಲೀ ಅನುಮಾನ ಪಡುವುದು ಬೇಡ. ಸಭೆಯ ಮುಂದೆ ಈ ಬಗ್ಗೆ ಯಾವ ಮೋಷನ್ ಇಲ್ಲ ಎನ್ನುವ ವಿಷಯ ವ್ಯಕ್ತವಾಗಿದ್ದರೂ ಸಹ ಆ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ನಾವು ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತಿದ್ದೆವೆ. ಮತ್ತು ಈಗ ಅಧ್ಯಕ್ಷರು ಏನು ರೂಲಿಂಗ್ ಕೊಟ್ಟಿದ್ದಾರೆ ಅದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ನಾವೆಲ್ಲರೂ ಒತ್ತಾಯ ಮಾಡುತ್ತಿದ್ದೇವೆ.

ಶ್ರೀ ಎಸ್. ಎಂ. ಕೃಷ್ಣ.—ಆ ತರಹ ಮಾಡುವುದಕ್ಕೆ ರೂಲ್ಸ್‌ನಲ್ಲಿ ಪ್ರಾವಿಜನ್ ಇಲ್ಲ.

ಅಧ್ಯಕ್ಷರು.—ಆ ಕಾರಣದಿಂದಲೇ ಮುಖ್ಯಮಂತ್ರಿಗಳು ಹೇಳಿಕೆ ಕೊಡುವುದು ಸೂಕ್ತವಲ್ಲ ಎಂದು ಹೇಳಿ ಹೋಗಿದ್ದಾರೆ.

ಶ್ರೀ ಎಸ್. ಬಂಗಾರಪ್ಪ. —ವಿಶೇಷ ಸಂದರ್ಭಗಳಲ್ಲಿ ಹೇಳಿಕೆ ಕೊಟ್ಟರೆ ಅದು ತಪ್ಪಾಗುವುದಿಲ್ಲ. ಆದಕಾರಣ ಅವರನ್ನು ಇಲ್ಲಿಗೆ ಕರೆಸಬೇಕು. ಮತ್ತು ನಾವು ಕಳಿಸಿರತಕ್ಕಂಥ ಮೋಷನನ್ನು ಪುನರ್‌ಪರಿಶೀಲನೆ ಮಾಡಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು-

ಅಧ್ಯಕ್ಷರು —ಮಾನ್ಯ ಸದಸ್ಯರ ಮೋಷನನ್ನು ಪುನರ್‌ಪರಿಶೀಲನೆ ಮಾಡುವುದಕ್ಕೆ ಆಗುವುದಿಲ್ಲ ವೆಂದು ನಾನು ಹೇಳಿದ್ದಾಯಿತು. ಆ ಒಗ್ಗೆ ಇನ್ನೊಂದು ನೋಟೀಸ್ ಇರಬಹುದು ; ಆದರೆ ಅದಕ್ಕೆ ನಾನು ಇನ್ನೂ ಅನುಮತಿ ಕೊಟ್ಟಿಲ್ಲ. ಮಾನ್ಯ ಸದಸ್ಯರು ಅವರ ಮೋಷನನ್ನು ಪುನರ್‌ಪರಿಶೀಲನೆ ಬೇಕೆಂದು ಕಳೆದ ಮೂರು ದಿವಸಗಳಿಂದಲೂ ಹೇಳುತ್ತಿದ್ದಾರೆ ; ಆದರೆ ನಾನು ಆಗುವುದಿಲ್ಲವೆಂದು ಹೇಳಿದ್ದೇನೆ. ಈ ಕಾರಣದಿಂದ ಮಾನ್ಯ ಮುಖ್ಯಮಂತ್ರಿಗಳು ಯಾವ ತರಹದ ಸ್ಟೇಟ್‌ಮೆಂಟನ್ನೂ ಮಾಡುವುದಿಲ್ಲವೆಂದು ಹೇಳಿ ಹೋಗಿದ್ದಾರೆ. ಆದರೂ ಸಹ ಮುಂದಿನ ಕಾರ್ಯಕ್ರಮವನ್ನು ತೆಗೆದು ಕೊಳ್ಳುವುದಕ್ಕೆ ಅವರು ಒಪ್ಪುತ್ತಿಲ್ಲ ; ಮುಂದಿನ ವಿಷಯಕ್ಕೆ ಹೋಗಲು ಅವರಿಗೆ ಇಷ್ಟವಿಲ್ಲವೆಂದು ಕಾಣುತ್ತದೆ. ಆದ್ದರಿಂದ ನಾನು ಸಭೆಯನ್ನು ಅಡ್ಜರ್ನ್ ಮಾಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಆಗೋದಿಲ್ಲ.

ಕೆಲವು ಮಾನ್ಯ ಸದಸ್ಯರು.—ಮುಖ್ಯಮಂತ್ರಿಗಳನ್ನು ಕರೆಸಬೇಕು.

MADAM SPEAKER.—The House stands adjourned *sinedie*.

The House adjourned sine die *at Thirty Minutes Past Four of the Clock.*

WD 1274—GPB—550—30-12-1974